1948 K8§524

ಶಿವಾನುಭವ ಗ್ರಂಥಮಾಲಾ ನಂ|| ೧೧

ಪರಮಾತ್ಮನ ಸ್ವರೂಪ

(ವಚನಗಳು.)

★

Q234:31
33Ha1
7967

ಫ. ಗು. ಹಳಕಟ್ಟಿ.

ಕಿಂ: - ೮ ೧೨-೦

Q234:31
33Hal
7969
ANo.7969
VIJAY COLLEGE LIBRARY
BIJAPUR.
7969
(BOOK-FLAP)
Q234:31
33Hal

G.R
N2148
ANo.7969 1.1.24
KB
524

1948

ಪರಮಾತ್ಮನ ಸ್ವರೂಪ

ವಚನಗಳು.

The Vijay College
LIBRARY
VIJAY COLLEGE.
BIJAPUR.

ಸಂಪಾದಕರು

ರಾ|| ಬ|| ಫ. ಗು. ಹಳಕಟ್ಟಿ,

ಬಿ. ಎ. ಎಲ್. ಎಲ್. ಬಿ.

ವಿಜಾಪುರ.

Q234:31
33 Hal
7969

(ಇದರ ಯಾವತ್ತು ಅಧಿಕಾರವು ಕಾದಿಡಲ್ಪಟ್ಟಿದೆ.)

ANo
114

ಬೆಲೆ:— ೦—೧೨—೦

7969

ಇದನ್ನು ವಿಜಾಪುರದಲ್ಲಿ ರಾ|| ಬ|| ಫ. ಗು. ಹಳಕಟ್ಟಿ ಇವರು ತಮ್ಮ
“ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ ” ನಲ್ಲಿ ಮುದ್ರಿಸಿದರು
ಮತ್ತು ಅವರು ಅಲ್ಲಿಯೇ ಪ್ರಕಟಿಸಿದರು.

ವೇದಾಂತ ಕೇಸರಿ

ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು

ತುಂಡರಬಿ ವ್ಯೆಗಿರಿಸಿ ಕಂಬಳಿಯ ತಾಹೊದ್ದು
ಕೋಲೊಂದು ಕೈಯಾಗ ಹಿಡಿದಾರ
ಊರೂರ ಸುತ್ತಾಡಿ ಶಿವತತ್ವ ಹೇಳಂದಕ
ಸರ್ವಜ್ಞ ನಡೆದಂಗ ನಡೆದಾರ ॥

ಮಲ್ಲಿಕಾರ್ಜುನ ಯೋಗಿ ಮಲ್ಲಿಗಿ ಹೂವಂಗ
ಎಲ್ಲರ ಮನದಾಗ ನೆಲಸ್ಯಾರ
ಅಲ್ಲಮನು ಬಂದಂಗ ಎಲ್ಲೆಡೆಗೆ ತಾಬಂದಂ
ಬೆಲ್ಲದಂತ ನುಡಿಯ ತಿಳಿಸ್ಯಾರ ॥

ಡಾ॥ ಆರ್. ಸಿ. ಮುದ್ದೇಬಿಹಾಳ

ಗ್ರಂಥಾಲಯ
ಬಿ. ಎಲ್. ಡಿ. ಇ. ಸಂಸ್ಥೆ
114
The Vijay College
ಕನ್ನಡ ಎ. ಎ. ಹಂತದಿಂದ ಮಾನ್ಯತೆ ಪಡೆದ
ಸಂಶೋಧನ ಕೇಂದ್ರ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಗ್ರಂಥಾಲಯ ವಿಜಯಪುರ

ಪ್ರಸ್ತಾವನೆ

ಈ ಗ್ರಂಥದಲ್ಲಿ ಪರಮಾತ್ಮನಿಗೆ ಸಂಬಂಧಪಟ್ಟ [illegible] ವಚನಗಳಲ್ಲಿರುವ ೧೦೧ ಉಕ್ತಿಗಳು ಉದಹರಿಸಲ್ಪಟ್ಟಿರುತ್ತವೆ. [illegible] ಮಾದರಿಯ ಮೇರೆಗೆ ಬಸವೇಶ್ವರನ ಭಕ್ತಿಯ [illegible] ರುವ ೧೦೧ ವಚನಗಳು "ಬಸವೇಶ್ವರನ ಭಕ್ತಿಯ ವಚನಗಳು" ಎಂಬ ಹೆಸರಿನಿಂದ ಗ್ರಂಥ ರೂಪಾಗಿ ಈ ಮೊದಲಿಗೆಯೇ ಪ್ರಸಿದ್ಧವಾಗಿರುತ್ತವೆ. ಈ ಎರಡೂ ಗ್ರಂಥಗಳಲ್ಲಿ ಪ್ರತಿಯೊಂದು ವಚನಕ್ಕೆ ಭಾವವು ಕೊಡಲ್ಪಟ್ಟಿರುತ್ತದೆ. ಗ್ರಾಮಾಂತರಗಳಲ್ಲಿರುವ ಜನರು ಬಸವೇಶ್ವರನ ವಚನಗಳ ನಿಜ ಸ್ವರೂಪನ್ನೂ ಅವುಗಳಲ್ಲಿರುವ ತತ್ವಗಳನ್ನೂ ಅರಿತುಕೊಳ್ಳಬೇಕೆಂಬುದೇ ಈ ಗ್ರಂಥಗಳ ಮುಖ್ಯ ಉದ್ದೇಶವಾಗಿರುತ್ತವೆ.

ಪ್ರತಿಯೊಂದು ಧರ್ಮದಲ್ಲಿ ದೇವರ ಸಂಬಂಧವಾಗಿರುವ ವಿಚಾರಗಳು ಅದಕ್ಕೆ ತಳಹದಿಯಾಗಿರುತ್ತವೆ. ಅವುಗಳೇ ಆ ಧರ್ಮದ ನಿಜ ಸ್ವರೂಪನ್ನು ಪ್ರಕಾಶ ಪಡಿಸುತ್ತವೆ. ಆದ್ದರಿಂದ ಈ ವಿಷಯದ ಜ್ಞಾನವು ಧರ್ಮದ ಅಭ್ಯಾಸ ಮಾಡುವವರಿಗೆ ಅತ್ಯಂತ ಮಹತ್ವದ್ದಾಗಿರುತ್ತದೆ. ವೀರಶೈವ ಧರ್ಮದಲ್ಲಿ ದೇವರ ವಿಷಯವಾಗಿ ಉದಾತ್ತ ವಿಚಾರಗಳಿರುತ್ತವೆ. ಇವುಗಳನ್ನು ವಾಚಕರು ಈ ಗ್ರಂಥದಲ್ಲಿ ಕಾಣಬಹುದಾಗಿದೆ. ವಚನಕಾರರು ಪರಮಾತ್ಮನು ಒಬ್ಬನೇ ಇದ್ದಾನೆ, ಅವನು ಸರ್ವವ್ಯಾಪಿಯಾಗಿದ್ದಾನೆ, ಎಂಬ ಅಭಿಪ್ರಾಯವುಳ್ಳವರಿದ್ದಾರೆ. ಇವನ್ನು ಅವರು ತಮ್ಮ ವಚನಗಳಲ್ಲಿ ಬಹು ಸ್ಪುಟವಾಗಿ ಹೇಳಿದ್ದಾರೆ. ಒಂದುವೇಳೆ ಜನರು ಈ ತತ್ವಗಳಂತೆ ವರ್ತಿಸಿದಲ್ಲಿ ಅವರಲ್ಲಿ ಕಂಡುಬರುವ ಅನೇಕ ಧಾರ್ಮಿಕ ಮೂಢ ನಂಬಿಗೆಗಳೂ ಧರ್ಮದ ಹೆಸರಿನಿಂದ ನಡೆಯುವ ಕ್ರೂರಾಚಾರಗಳೂ ದೂರಾಗದೆ ಇರವು.

ವೀರಶೈವ ಧರ್ಮದಲ್ಲಿ ಇಂಥ ವಿಚಾರಗಳಿದ್ದರೂ ಕೂಡ ಅವುಗಳ ತಿಳಿವಳಿಕೆ ಜನರಲ್ಲಿ ಇರುವದಿಲ್ಲ. ಈ ಸ್ಥಿತಿಯನ್ನು ಹೋಗಲಾಡಿಸುವ ಉದ್ದಿಶ್ಯವಾಗಿ ನಾವು ಈ ಗ್ರಂಥವನ್ನು ಪ್ರಕಟ ಪಡಿಸಿದ್ದೇವೆ. ಈ ನಮ್ಮ ಉದ್ದೇಶವು ಕೆಲಮಟ್ಟಿಗಾದರೂ ಈ ಗ್ರಂಥದಿಂದ ನೆರವೇರುವದೆಂದು ನಾವು ಭರವಸೆ ಹೊಂದಿದ್ದೇವೆ.

ವಿಜಾಪುರ
೭—೬—೧೯೪೮

ಫ. ಗು. ಹಳಕಟ್ಟಿ,
ಸಂಪಾದಕ.

ಅನುಕ್ರಮಣಿಕೆ.

		ಪುಟಗಳು
೧.	ಪರಮಾತ್ಮ	೧
೨.	ಜಗತ್ತಿನಲ್ಲಿ ಪರಮಾತ್ಮನ ಇರುವಿಕೆಯ ರೀತಿ	೭
೩.	ದೇವರು ಒಬ್ಬನೇ ಇದ್ದಾನೆ.	೮
೪.	ಬ್ರಹ್ಮ ವಿಷ್ಣು ರುದ್ರರಲ್ಲಾರೂ ಪರಮಾತ್ಮನಲ್ಲ	೧೩
೫.	ಬ್ರಹ್ಮ ವಿಷ್ಣುಗಳಲ್ಲಾರೂ ಪರಮಾತ್ಮನಲ್ಲ	೧೪
೬.	ಕಿರುಕುಳ ದೇವತೆಗಳಲ್ಲಾರೂ .... ಪರಮಾತ್ಮನಲ್ಲ	೧೭
೭.	ಯಜ್ಞಗಳನ್ನು ಮಾಡದಿರು, ಬಲಿ ... . ಕೊಡಬೇಡ	೨೫
೮.	ಜ್ಯೋತಿಷ್ಯವನ್ನು ನಂಬಬೇಡ	೨೭
೯.	ತೀರ್ಥಯಾತ್ರೆಗಳನ್ನು ಮಾಡಬೇಡ ...	೩೦
೧೦.	ಪ್ರಾಯಶ್ಚಿತ್ತಗಳಿಲ್ಲ	೩೪
೧೧.	ಕರ್ಮಠನಾಗಬೇಡ	೩೬
೧೨.	ಪರಮಾತ್ಮನು ತನ್ನಲ್ಲಿಯೇ ಇದ್ದಾನೆ	೩೮
೧೩.	ಪರಮಾತ್ಮನನ್ನು ತನ್ನಲ್ಲಿಯೇ ಕಾಣುವದು	೪೨
೧೪.	ಲಿಂಗಧ್ಯಾನ	೪೪
೧೫.	ಲಿಂಗದಲ್ಲಿ ಸಾಮರಸ್ಯವು	೪೬

114
The V... College
L...RARY,
VIJAY COLLEGE,
BIJAPUR.

ಪರಮಾತ್ಮನ ಸ್ವರೂಪ.

ಪರಮಾತ್ಮ

(೧) ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ. ಸಕಳ ವಿಸ್ತಾರದ ರೂಹು ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ. ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ ಮುಖ ನೀನೇ ದೇವಾ. ವಿಶ್ವತೋ ಪಾದ ನೀನೇ ದೇವಾ ಕೂಡಲಸಂಗಮದೇವಾ.

ರೂಹು = ರೂಪು; ವಿಶ್ವತೋ = ಜಗತ್ತಿನಲ್ಲೆಲ್ಲ.

ಭಾವಃ— ನಾನು ನೋಡಿದಲ್ಲೆಲ್ಲ ನೀನೇ ಇದ್ದೀ. ವಿಶ್ವವು ನನ್ನ ಸುತ್ತಲೂ ವಿಸ್ತಾರವಾದ ರೂಪನ್ನು ಹೊಂದಿದೆ. ಎಲೋ ಪರಮಾತ್ಮನೇ, ಅದೆಲ್ಲವೂ ನೀನೇ. ಈ ವಿಶ್ವವೆಲ್ಲವೂ ನಿನ್ನ ಬಾಹುಗಳು. ವಿಶ್ವವೆಲ್ಲವೂ ನಿನ್ನ ನೇತ್ರಗಳು. ಎಲೋ ದೇವನೇ, ವಿಶ್ವವೆಲ್ಲವೂ ನಿನ್ನ ಮುಖವು. ವಿಶ್ವವೆಲ್ಲವೂ ನಿನ್ನ ಪಾದಗಳು. ಹೀಗೆ ವಿಶ್ವವೆಲ್ಲ ನೀನೇಯಾಗಿದ್ದೀ. ಪರಮಾತ್ಮನು ಸರ್ವವ್ಯಾಪಿಯಾಗಿದ್ದಾನೆಂದು ಹೇಳುವದೇ ಬಸವೇಶ್ವರನ ಅಭಿಪ್ರಾಯವು.

(೨) ಸಕಳ ನಿಃಕಳವ ಕೂಡಿಕೊಂಡಿಪ್ಪೆಯಾಗಿ, ಸಕಳ ನೀನೇ ನಿಃಕಳ ನೀನೇ ಕಂಡಯ್ಯ. ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ ಮುಖ ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ ಕೂಡಲ ಸಂಗಮದೇವಾ.

ಸಕಳ = ಅವಯುವ ಸಹಿತವಾದದ್ದು, ಕಾಣುವಂಥಾದ್ದು; ನಿಃಕಳ = ಅವಯುವ ರಹಿತವಾದದ್ದು, ಕಾಣದಂಥಾದ್ದು.

ಭಾವಃ— ಕಾಣುವಂತಹದೆಲ್ಲವೂ ನೀನೇ. ಕಾಣದಂತಹದೆಲ್ಲವೂ ನೀನೇ. ಅವುಗಳಲ್ಲೆಲ್ಲ ನೀನೇ ಇರುವಿ. ಎಲೋ ದೇವನೇ, ವಿಶ್ವವೇ ಚಕ್ಷುವಾಗಿ ನೀನಿರುವಿ. ಎಲೋ ದೇವನೇ, ವಿಶ್ವವೇ ಮುಖವಾಗಿ ನೀನಿರುವಿ. ಎಲೋ ದೇವನೇ, ವಿಶ್ವವೇ ಬಾಹುವಾಗಿ ನೀನಿರುವಿ.

(೩) ಶ್ರುತಿ ತತಿ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲನ ನಾನೇನೆಂಬೆನಯ್ಯಾ? ಘನಕ್ಕೆ ಘನ ಮಹಿಮನ ಮನಕ್ಕಗೋಚರನ ಅಣೋರಣೀಯಾನ್ ಮಹತೋಮಹೀಯಾನ್ ಮಹಾದಾನಿ ಕೂಡಲಸಂಗಮದೇವ.

ಶ್ರುತಿತತಿ = ವೇದಗಳ ಸಮೂಹ; ಅತ್ಯತಿಷ್ಠತ್ = ದಾಟಿ ನಿಲ್ಲುವ; ದಶಾಂಗುಲ = ಹತ್ತು ಬೆರಳು; ಘನ = ದೊಡ್ಡ; ಅಗೋಚರ = ಕಣ್ಣಿಗೆ ಕಾಣದ; ಅಣೋರಣೀಯಾನ್ = ಸಣ್ಣದಕ್ಕಿಂತಲೂ ಸಣ್ಣದು; ಮಹತೋಮಹೀಯಾನ್ = ದೊಡ್ಡದಕ್ಕಿಂತಲೂ ದೊಡ್ಡದು.

ಭಾವಃ— ವೇದಗಳ ಶಿರಸ್ಸನ್ನು ದಾಟಿ ಹತ್ತು ಬೆರಳುಗಳಾಚೆ ನೀನಿರುವಿ. ಇಂಥವನಾದ ನಿನಗೆ ನಾನೇನೆನ್ನಲಿ! ನಿನ್ನ ಮಹಿಮೆಯು ಎಲ್ಲಕ್ಕಿಂತಲೂ ದೊಡ್ಡದು. ನೀನು ಮನಸ್ಸಿಗೆ ಕಾಣದವನು. ಎಲೋ ದಾನಗುಣವುಳ್ಳ ಪರಮಾತ್ಮನೇ, ನೀನು ಸಣ್ಣದಕ್ಕಿಂತಲೂ ಸಣ್ಣವನು, ದೊಡ್ಡದಕ್ಕಿಂತಲೂ ದೊಡ್ಡವನು.

(೪) ಅಷ್ಟತನುಮೂರ್ತಿ ಲಿಂಗವೆಂಬರು. ಇವರಾರೆಂದು ನಾನರಿಯೆನಯ್ಯಾ. ಆದಿಯ ಮಗನತೀತನು. ಅತೀತನ ಮಗನಾಕಾಶ. ಆಕಾಶನ ಮಗ ವಾಯು. ವಾಯುವಿನ ಮಗ ಅಗ್ನಿ. ಅಗ್ನಿಯ ಮಗನಪ್ಪು. ಅಪ್ಪುವಿನ ಮಗ ಪೃಥ್ವಿ. ಪೃಥ್ವಿಯ ಮಗ ಚಂದ್ರ. ಚಂದ್ರನ ಮಗ ಸೂರ್ಯ. ಸೂರ್ಯನ ಮಗ ದೇಹ. ದೇಹನ ಮಗ ನಾತ್ಮ. ಇಂತೀ ಅಷ್ಟತನುವೆಲ್ಲಕ್ಕೆಯೂ ಉತ್ಪತ್ತಿಯುಂಟು. ಅಜಾತ ಜನಿತ ನಮ್ಮ ಕೂಡಲಸಂಗಮದೇವಂಗೆ ಮಾತಾಪಿತರುಗಳಿಲ್ಲ.

ಅಷ್ಟತನುಮೂರ್ತಿ = ಎಂಟು ಶರೀರಗಳುಳ್ಳ ಒಂದು ಮೂರ್ತಿ; ಅತೀತ = ತರುವಾಯ ಇದ್ದವನು; ಅಜಾತ = ಹುಟ್ಟಿಲ್ಲದ; ಜನಿತ = ಹುಟ್ಟಿದವ.

ಭಾವಃ— ಲಿಂಗವು ಅಂದರೆ ಪರಮಾತ್ಮನು ಅಷ್ಟ ತನುಗಳುಳ್ಳ ಒಂದು ಮೂರ್ತಿ ಎಂದು ಹೇಳುತ್ತಾರೆ. ಆದರೆ ಈ ತನುಗಳಾರೆಂಬುದು ನನಗೆ ತಿಳಿಯದು. ಯಾಕಂದರೆ ಆದಿಯಿಂದ ಅತೀತನು ಹುಟ್ಟಿದನು. ಅತೀತನಿಂದ ಆಕಾಶವು, ಆಕಾಶದಿಂದ ವಾಯುವು, ವಾಯುವಿನಿಂದ ಅಗ್ನಿಯು, ಅಗ್ನಿಯಿಂದ ಅಪ್ಪು, ಅಪ್ಪುವಿನಿಂದ ಪೃಥ್ವಿಯು, ಪೃಥ್ವಿಯಿಂದ ಚಂದ್ರನು, ಚಂದ್ರನಿಂದ ಸೂರ್ಯನು, ಸೂರ್ಯನಿಂದ ದೇಹವು, ದೇಹದಿಂದ ಆತ್ಮನು ಹುಟ್ಟಿರುತ್ತಾರೆ. ಹೀಗೆ ಈ ಎಂಟು ತನುಗಳಿಗೆಲ್ಲ ಉತ್ಪತ್ತಿ ಇದೆ. ಆದರೆ ಪರಮಾತ್ಮನಿಗೆ ಉತ್ಪತ್ತಿ ಎಂಬುದಿಲ್ಲ. ಅವನಿಗೆ ತಂದೆ ತಾಯಿಗಳಿಲ್ಲ.

(೫) ರುದ್ರ ಮುಖದಲ್ಲಿ ವಿಷ್ಣು ಭುಜದಲ್ಲಿ ಜಂಘೆಯಲ್ಲಿ ಅಜನ ಜನನವು. ಇಂದ್ರ ಪಾದದಲ್ಲಿ ಚಂದ್ರ ಮನದಲ್ಲಿ ಚಕ್ಷುವಿನಲ್ಲಿ ಸೂರ್ಯ ಜನನವು. ಮುಖದಲ್ಲಿ ಅಗ್ನಿ ಪ್ರಾಣದಲ್ಲಿ ವಾಯು ನಾಭಿಯಲ್ಲಿ ಅಂತರಿಕ್ಷವು. ಶಿರದಲುದಯವು ತೆತ್ತೀಸ ಕೋಟಿ ದೇವರ್ಕಳು. ಪಾದ ತಳದಲ್ಲಿ ಭೂಮಿ ಜನನವು. ಶ್ರೋತ್ರದಲ್ಲಿ ದಶದಿಕ್ಕುವು. ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ. ಅಕ್ಷಯನಗಣಿತನು. ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ, ಸಾಸಿರ ಸನ್ನಿಹಿತ ನಮ್ಮ ಕೂಡಲ ಸಂಗಯ್ಯ.

ಭುಜ = ಹೆಗಲು; ಜಂಘೆ = ತೊಡೆ; ಅಜ = ಬ್ರಹ್ಮ; ಚಕ್ಷು = ಕಣ್ಣು; ನಾಭಿ = ಹೊಕ್ಕುಳ; ನಿಕ್ಷೇಪಿಸು = ಇಡು; ಕುಕ್ಷಿ = ಹೊಟ್ಟೆ; ಅಕ್ಷಯನು = ನಾಶವಿಲ್ಲದವನು; ಅಗಣಿತನು = ಎಣಿಕೆ ಇಲ್ಲದವನು; ಸಾಸಿರ = ಸಾವಿರ; ಸನ್ನಿಹಿತ = ಸಮೀಪವಿದ್ದವನು.

ಭಾವಃ— ರುದ್ರನು ಪರಮಾತ್ಮನ ಮುಖದಲ್ಲಿ, ವಿಷ್ಣುವು ಅವನ ಭುಜದಲ್ಲಿ, ಬ್ರಹ್ಮನು ಅವನ ತೊಡೆಯಲ್ಲಿ ಹುಟ್ಟಿದ್ದಾರೆ. ಇಂದ್ರನು ಪಾದದಲ್ಲಿ, ಚಂದ್ರನು ಮನಸ್ಸಿನಲ್ಲಿ, ಸೂರ್ಯನು ಕಣ್ಣಿನಲ್ಲಿ ಹುಟ್ಟಿದ್ದಾರೆ. ಅವನ ಮುಖದಲ್ಲಿ ಅಗ್ನಿಯು, ಪ್ರಾಣದಲ್ಲಿ ವಾಯುವು, ಹೊಕ್ಕುಳಲ್ಲಿ ಆಕಾಶವು ಹುಟ್ಟಿವೆ. ಮೂವತ್ತುಮೂರು ಕೋಟಿ ದೇವತೆಗಳೆಲ್ಲ ಅವನ ಶಿರದಲ್ಲುಂಟಾಗಿದ್ದಾರೆ. ಅವನು ತನ್ನ ಹೊಟ್ಟೆಯಲ್ಲಿ ಜಗವನ್ನು ಇಟ್ಟುಕೊಂಡಿದ್ದಾನೆ. ಅವನಿಗೆ ನಾಶವೆಂಬುದಿಲ್ಲ, ಎಣಿಕೆ ಎಂಬುದಿಲ್ಲ. ಅವನಿಗೆ ಸಾವಿರ ತಲೆಗಳು, ಸಾವಿರ ಕಣ್ಣುಗಳು, ಸಾವಿರ ಕೈಗಳು, ಸಾವಿರ ಪಾದಗಳು ಇವೆ. ಹೀಗೆ ಅವನು ಸಾವಿರ ಸಂಖ್ಯೆಯುಳ್ಳಾತನಾಗಿದ್ದಾನೆ. ಇದು ವೇದದಲ್ಲಿಯ ವಾಕ್ಯವಿದ್ದು ಪರಮಾತ್ಮನು ವಿಶ್ವವ್ಯಾಪಿ ಎಂದು ಹೇಳುವದೇ ಬಸವೇಶ್ವರನ ಅಭಿಪ್ರಾಯವು.

(೬) ಸಹಸ್ರ ಶೀರ್ಷನಾದಿಪುರುಷನು. ವೇದಪುರುಷನೊಬ್ಬ ಪುರುಷನು. ಜ್ಯೋತಿಪುರುಷನೊಬ್ಬ ಪುರುಷನು. ತ್ರಿಪಾದೂರ್ಧ್ವ ಪುರುಷನು. ಉದನ್ಮುಖನೊಬ್ಬ ಪುರುಷನು. ಉದಯಮುಖಪುರುಷನೊಬ್ಬನು. ವಿರಾಟ ಪುರುಷನೊಬ್ಬ ಪುರುಷನು. ಆದಿ ಪುರುಷನೊಬ್ಬ ಪುರುಷನು.

ನೊಬ್ಬ ಪುರುಷನು. ವಿಯತ್ಪುರುಷನೊಬ್ಬ ಪುರುಷನು. ವಿಯತ್ಪುರುಷನೊಬ್ಬ ಪುರುಷನೊಬ್ಬ ಪುರುಷನು. ತದ್ವಿಯತ್ ಪುರುಷಾತ್ ಪುರುಷರಿಲ್ಲದ ಪ್ರಭೆಯ ನೋಡಿರೇ. ವೇದನಾದಾತೀತ ತುರೀಯ ಪರಮಾನಂದ ನಿರವಯ ಷಟ್‌ತ್ರಿಂಶತ್ ಪ್ರಭಾಪಟಲದ ಪ್ರಭೆಯ ಬೆಳಗ್ಗಿವೆ ನೋಡಿರೇ. ಬೆಳಗಿನೊಳಗಣ ಮಹಾಬೆಳಗಿನ ಬೆಳಗು ಕೂಡಲ ಸಂಗಮದೇವಯ್ಯ.

ಶೀರ್ಷ = ತಲೆ; ತ್ರಿಪಾದ್ = ಮೂರು ಕಾಲುಗಳು; ಉಧ್ರ್ವ= ಎತ್ತರ; ಉದನ್ಮುಖ = ಮೇಲು ಮುಖವುಳ್ಳವನು; ವಿಯತ್ಪುರುಷ = ಆಕಾಶ ಪುರುಷ; ತುರೀಯ = ಇಹವನ್ನು ಮೀರಿದ; ನಿರವಯ = ಅವಯವವಿಲ್ಲದ; ಷಟ್‌ತ್ರಿಂಶತ್ = ಮೂವತ್ತಾರು; ಪ್ರಭೆ = ಬೆಳಕು.

ಭಾವಃ— ಆದಿಪುರುಷನಾದ ಪರಮಾತ್ಮನಿಗೆ ಸಾವಿರ ತಲೆಗಳಿವೆ. ವೇದಗಳು ಹೊಗಳುವಂಥ ಯಾವ ಪುರುಷನೋ ಅಂಥ ಆ ಪರಮಾತ್ಮನು ಒಬ್ಬನೇ ಇದ್ದಾನೆ. ಪ್ರಕಾಶಮಯನಾದ ಯಾವ ಪುರುಷನೋ ಅವನು ಒಬ್ಬನೇ ಇದ್ದಾನೆ. ಮೂರು ಕಾಲುಗಳುಳ್ಳ ಅತಿ ಎತ್ತರವಾದ ಯಾವ ಪುರುಷನೋ ಅವನು ಒಬ್ಬನೇ ಇದ್ದಾನೆ. ಮೇಲುಮುಖವುಳ್ಳವನು ಒಬ್ಬನೇ. ಉದಯವಾಗುತ್ತಿರುವ ಮುಖವುಳ್ಳವನು, ವಿರಾಟ ಪುರುಷನು, ಮೂಲಪುರುಷನು, ಆಕಾಶ ಪುರುಷನು, ಇಂಥ ಪುರುಷನಾದವನು ಒಬ್ಬನೇ ಇದ್ದಾನೆ. ಅವನನ್ನು ಬಿಟ್ಟು ಯಾರೂ ಇಲ್ಲ. ಪರಮಾತ್ಮನು ಇದೆಲ್ಲವನ್ನು ಸಹ ಮೀರಿದವನಾಗಿದ್ದು, ಅವನ ಬೆಳಕನ್ನು ನೋಡಿರೋ! ಈ ಬೆಳಕು ವೇದ ಮತ್ತು ಪ್ರಣವಗಳನ್ನು ಮಿಕ್ಕಿದ ಆನಂದವು, ಪರಮಾನಂದವಾಗಿದೆ. ಅದಕ್ಕೆ ಅವಯವಗಳೆಂಬುವಿಲ್ಲ. ಅದು ಬೆಳಕಿನೊಳಗಿನ ಬೆಳಕು. ಇದು ಬೆಳಕಿನೊಳಗಿನ ಮಹಾಬೆಳಕಿನ ಬೆಳಕು. ಈ ಪ್ರಕಾರ ಬಸವೇಶ್ವರನು ಪರಮಾತ್ಮನ ಸ್ವರೂಪವನ್ನು ವೇದಗಳಲ್ಲಿರುವ ಅತ್ಯಂತ ಭಾವನಾಮಯ ಶಬ್ದಗಳಿಂದ ವರ್ಣಿಸುತ್ತಾನೆ.

(೭) ವಿಶ್ವಜಿತನು, ದನುಜಜಿತನು, ಸರ್ವಜಿತನು, ಸುತ್ರಾಮಜಿತನು, ನೃಜಿತನು, ಊರ್ವಜಿತನು, ಅಶ್ವಜಿತನು, ಗೋಜಿತನು, ಅಚ್ಯುತಜಿತನು, ಸುಸಂವೇದ್ಯನು, ವೇದನಾದಾತೀತನು, ತುರೀಯ ಪರಮಾನಂದ ನಿರವಯ ಕೋಟಿ ಸೂರ್ಯ ಪ್ರಭೆಯ ಬೆಳಗಿನ ಸಹಸ್ರ ಕಿರಣದ ಅಗ್ರಪಟಲದ ಬೆಳಗು ಕೂಡಲಸಂಗಯ್ಯ.

ವಿಶ್ವಜಿತನು = ಜಗತ್ತನ್ನು ಗೆದ್ದವನು; ದನುಜ = ರಾಕ್ಷಸ; ಸುತ್ರಾಮ = ಇಂದ್ರ; ಊರ್ವ = ವಡಬಾನಲ; ನೃ = ಮನುಷ್ಯ; ಸುಸಂವೇದ್ಯನು = ಚನ್ನಾಗಿ ಬಲ್ಲಂಥವನು; ಅತೀತನು = ದಾಟಿದವನು; ತುರೀಯ = ಪರಮಾತ್ಮನಲ್ಲಿ ಬೆರೆದ.

ಭಾವಃ— ಪರಮಾತ್ಮನು ಜಗತ್ತನ್ನು ಗೆದ್ದವನು. ರಾಕ್ಷಸರನ್ನು ಗೆದ್ದವನು. ಎಲ್ಲರನ್ನೂ ಗೆದ್ದವನು. ಇಂದ್ರ, ನರರು, ವಡಬಾನಲ, ಅಶ್ವ, ಗೋವು, ಅಚ್ಯುತ ಇವರೆಲ್ಲರನ್ನೂ ಗೆದ್ದವನು. ಅತ್ಯಂತ ಪಂಡಿತನು. ವೇದ, ನಾದ ಇವುಗಳಿಗೆ ಮೀರಿದವನು. ಪರಮಾತ್ಮನಲ್ಲಿ ಬೆರೆದ ಪರಮಾನಂದ, ಮತ್ತು ಅವಯವ ರಹಿತವಾದ ಸ್ಥಿತಿ, ಇವುಗಳಿಗೂ ಕೂಡ ಮೀರಿದವನಾಗಿ, ಕೋಟಿ ಸೂರ್ಯರ ಬೆಳಕಿನೊಳಗಿನ ಬೆಳಕಿನಲ್ಲಿಯ ಸಾವಿರ ಕಿರಣಗಳಿಂದಾದ ಮುಖ್ಯ ಪಟಲದ ಬೆಳಕು ಆ ಪರಮಾತ್ಮನಿದ್ದಾನೆ. ಈ ಪ್ರಕಾರ ಬಸವೇಶ್ವರನು ಪರಮಾತ್ಮನನ್ನು ವೇದಗಳಲ್ಲಿಯ ಶಬ್ದಗಳಿಂದಲೇ ಇಲ್ಲಿ ವರ್ಣಿಸಿದ್ದಾನೆ.

(೮) ವೇದಾತೀತ ಷಡುವರ್ಣರಹಿತ ಅಷ್ಟತ್ರಿಂಶತ್ಕಳಾತೀತ ವ್ಯೋಮಾತೀತ ಕೂಡಲಸಂಗಮದೇವ.

ಅಷ್ಟತ್ರಿಂಶತ್ = ಮೂವತ್ತೆಂಟು; ವ್ಯೋಮ = ಆಕಾಶ.

ಭಾವಃ— ಎಲೋ ಪರಮಾತ್ಮನೇ, ನೀನು ವೇದಗಳಿಗೆ ಮೀರಿದವನು. ಮೂಲ ಬಣ್ಣಗಳು ಆರು ಇದ್ದು, ಅವುಗಳಿಗೆ ಮೀರಿದವನು. ಕಲೆಗಳು ಮೂವತ್ತೆಂಟು ಇದ್ದು, ಅವುಗಳಿಗೂ ಮೀರಿದವನು. ಪರಮಾತ್ಮನು ಆಕಾಶದ ಆಚೆಗೆ ಇದ್ದಾನೆ.

(೯). ವೇದ ವೇದಿಸಲರಿಯದೆ ಅಭೇದ್ಯಲಿಂಗವೆಂದು ನಡ ನಡುಗಿತ್ತು. ಶಾಸ್ತ್ರ ಸಾಧಿಸಲರಿಯದೆ ಅಸಾಧ್ಯಲಿಂಗವೆಂದು ಸಾರುತ್ತೈದಾವೆ. ತರ್ಕ ತರ್ಕಿಸಲರಿಯದೆ ಅತರ್ಕ್ಯ ಲಿಂಗವೆಂದು ಮನಗೊಳ್ಳವು. ಅಗಮ ಅಗಮ್ಯ ಲಿಂಗವೆಂದು ಗಮಿಸಲರಿಯದೆ ಹೋದವು. ನರರು ಸುರರು ಅಂತುವ ಕಾಣರು. ನಮ್ಮ ಕೂಡಲಸಂಗಮದೇವನ ಪ್ರಮಾಣವ ಶರಣ ಬಲ್ಲ.

ವೇದಿಸು = ತಿಳಿಯು; ಅಭೇದ್ಯ = ತಿಳಿಯಲಿಕ್ಕಾಗದ; ಮನಗೊಳ್ಳು = ಮನಸ್ಸು ಮಾಡು; ಅಗಮ್ಯ = ತಿಳಿಯಲಿಕ್ಕಾಗದ; ಪ್ರಮಾಣ = ಅಳತೆ.

ಭಾವಃ— ವೇದಗಳು ಪರಮಾತ್ಮನ ಸ್ವರೂಪವನ್ನು ಅರಿಯದೆ ಅವನ ಮರ್ಮವನ್ನು ತಿಳಿಯುವದು ಅಶಕ್ಯವೆಂದು ನುಡಿದು ಅಂಜಿ ನಡಗುತ್ತಿವೆ. ಶಾಸ್ತ್ರಗಳು ಪರಮಾತ್ಮನನ್ನು ಒಲಿಸುವದು ಶಕ್ಯವಲ್ಲ ವೆಂದು ಸಾರಿ ಹೇಳುತ್ತಿವೆ. ತರ್ಕಶಾಸ್ತ್ರವು ತರ್ಕದಿಂದ ಪರಮಾತ್ಮ ನನ್ನು ತಿಳಿಯುವದು ಆಗದೆಂದು ಅವನು ಅತರ್ಕ್ಯನೆಂದು ಹೇಳಿ ಅವನನ್ನು ಕಂಡುಹಿಡಿಯಲು ಮನಸ್ಸು ಮಾಡುವದಿಲ್ಲ. ಪರಮಾತ್ಮನ ರೀತಿಯನ್ನು ಮನುಷ್ಯರೂ ದೇವತೆಗಳೂ ಕೂಡ ಅರಿಯರು. ಅವನ ಸ್ವರೂಪವನ್ನು ಅರಿಯುವವರು ಶರಣರು ಮಾತ್ರ.

(೧೦) ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ ಹೆಸರಲ್ಲದೆ ಲಿಂಗ ಬೇರೆ ರೂಪನಲ್ಲ, ನಿರೂಪನಲ್ಲ. ಲಿಂಗ ಬೇರೆ ಕಾಯಸಂಬಂಧಿಯಲ್ಲ. ಲಿಂಗ ಬೇರೆ, ಮಹಾಘನದಿಂದತ್ತತ್ತ. ಕೂಡಲಸಂಗಮದೇವರ ನಿಲವ ಆರಿಗೆಯೂ ಅರಿಯಬಾರದು.

ನಿರೂಪ = ರೂಪವಿಲ್ಲದ್ದು.

ಭಾವಃ— ಪರಮಾತ್ಮನಿರುವ ಸ್ಥಾನಗಳಿಗೆ ಜನರು ಕೊಟ್ಟ ಏನೋ ಒಂದು ಹೆಸರು ಇರುತ್ತದೆಯೋ ಹೊರ್ತು, ಅವನಿಗೆ ರೂಪೂ ಇಲ್ಲ, ರೂಪು ಇಲ್ಲದ್ದೂ ಇಲ್ಲ. ಅವನ ಸ್ವರೂಪವನ್ನು ಹೇಳಲಿಕ್ಕೆ ಬರಲಾರದು. ಪರಮಾತ್ಮನು ದೇಹಕ್ಕೆ ಸಂಬಂಧಿಸಿದವನಲ್ಲ. ಅವನ ರೀತಿಯೇ ಬೇರೆ. ಅತ್ಯಂತ ಘನತರವಾದ ವಸ್ತುವನ್ನು ದಾಟಿ ಅವನು ಬಹು ದೂರನಿದ್ದಾನೆ. ಅವನ ಸ್ವರೂಪವನ್ನು ಅರಿಯಲು ಯಾರಿಗೂ ಶಕ್ಯವಲ್ಲ.

(೧೧) ಭೂ ತೋಯ ಪಾವಕ ಸಮೀರಣ ಅಂಬರಾದಿಗಳೆಲ್ಲ ಅದಿಯಾಧಾರ ಪರಮಾತ್ಮಲಿಂಗದಲ್ಲಿ. ಆದಿಮಧ್ಯಾವಸಾನವನರಿಯದೆ ಅಗಮ್ಯವೇದಾದಿ ಸಕಲಶಾಸ್ತ್ರ ಪ್ರಮಾಣರು ಅದನಿಂತಿಂತೆಂದುಪಮಿಸಲಿಲ್ಲ ಮಹಾಂತ ಕೂಡಲಸಂಗಮದೇವ.

ತೋಯ = ನೀರು; ಪಾವಕ = ಬೆಂಕಿ; ಸಮೀರಣ = ವಾಯು; ಅಂಬರ = ಆಕಾಶ; ಅವಸಾನ = ಅಂತ್ಯ; ಅಗಮ್ಯ = ತಿಳಿಯದೆ ಇದ್ದ; ಉಪಮಿಸು = ಉದಾಹರಣೆ ಕೊಟ್ಟು ಹೇಳು.

ಭಾವಃ— ಪರಮಾತ್ಮನು ಭೂಮಿ, ನೀರು, ಅಗ್ನಿ, ವಾಯು, ಆಕಾಶ ಮೊದಲಾದವುಗಳಿಗೆ ಮೊದಲಿನಿಂದಲೂ ಆಧಾರವಾಗಿದ್ದವನು.

ಇಂಥ ಪರಮಾತ್ಮನ ಮೂಲ ಮಧ್ಯ ಮತ್ತು ಅಂತ್ಯ ಇವುಗಳಲ್ಲಾವುದನ್ನೂ ತಿಳಿಯಲು ಶಕ್ಯವಿಲ್ಲ. ತಿಳಿಯಲಿಕ್ಕೆ ಕಠಿಣವಾಗಿರುವ ವೇದ ವೇದಾಂತ ಸಕಲ ಶಾಸ್ತ್ರಗಳನ್ನು ಆಧಾರವಾಗಿಟ್ಟುಕೊಂಡು ನಡಿಯುವವರು ಸಹ ಪರಮಾತ್ಮನು ಇಂಥವನು, ಅಂಥವನು ಎಂದು ದೃಷ್ಟಾಂತಗಳನ್ನು ಕೊಟ್ಟು ಹೇಳಲಿಕ್ಕೆ ಸಹ ಅವರು ಅಸಮರ್ಥರಾಗಿದ್ದಾರೆ.

ಜಗತ್ತಿನಲ್ಲಿ ಪರಮಾತ್ಮನ ಇರುವಿಕೆಯ ರೀತಿ.

(೧೨) ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತೆ ಇದ್ದಿತ್ತು. ಶಶಿಯೊಳಗಣ ರಸದ ರುಚಿಯಂತೆ ಇದ್ದಿತ್ತು. ನನೆಯೊಳಗಣ ಪರಿಮಳದಂತೆ ಇದ್ದಿತ್ತು. ಕೂಡಲಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು.

ಬೈಚಿಟ್ಟ = ಮುಚ್ಚಿಟ್ಟ; ಶಶಿ = ಚಂದ್ರ; ರಸ = ಅಮೃತ; ನನೆ = ಮೊಗ್ಗು; ಪರಿಮಳ = ಸುಗಂಧ; ಸ್ನೇಹ = ಪ್ರೀತಿ.

ಭಾವಃ— ಬಸವೇಶ್ವರನು ಈ ವಚನದಲ್ಲಿ ಜಗತ್ತು ಇನ್ನೂ ಪ್ರಕಟವಾಗದೆ ಇದ್ದಾಗ, ಅದಕ್ಕೂ ಪರಮಾತ್ಮನಿಗೂ ಯಾವ ತರದ ಸಂಬಂಧವಿರುತ್ತದೆಂಬದನ್ನು ವರ್ಣಿಸಿದ್ದಾನೆ. ವಡಬಾಗ್ನಿಯು ಸಮುದ್ರ ಮಧ್ಯದಲ್ಲಿದ್ದರೂ ಅದು ತನ್ನ ಉಷ್ಣತೆಯ ಗುಣವನ್ನು ಹೊರಗೆಡವದೆ ಅದರಲ್ಲಿ ಅದು ಗೂಢವಾಗಿಯೇ ವಾಸಿಸುತ್ತದೆ. ಅಮೃತವು ಚಂದ್ರನಲ್ಲಿದ್ದರೂ ಅದು ಅವನಲ್ಲಿ ಅಡಗಿಕೊಂಡಿರುತ್ತದೆ. ಹೂವಿನ ಮೊಗ್ಗುವಿನಲ್ಲಿ ಸುಗಂಧವು ಇದ್ದರೂ ಅದು ಪ್ರಕಟವಾಗದೆ ಅದರಲ್ಲಿಯೇ ಹುದುಗಿರುತ್ತದೆ. ಕನ್ನಿಕೆಯಲ್ಲಿ ರತಿಯು ಇದ್ದರೂ ಅದು ಹೊರಪಟ್ಟಿರುವದಿಲ್ಲ. ಎಲೋ ಪರಮಾತ್ಮನೇ, ಜಗತ್ತು ನಿನ್ನಲ್ಲಿ ಪ್ರಕಟವಾಗದೆ ಇದ್ದಾಗ ನೀನು ಈ ರೀತಿಯಾಗಿ ನಿನ್ನ ಗುಣಗಳನ್ನು ತೋರಗೊಡದೆ ಗೂಢವಾಗಿ ಅದರಲ್ಲಿಯೇ ವಾಸಿಸುತ್ತೀ.

(೧೩) ಕಾಳಿಯ ಕಂಕಾಳದಿಂದ ಮುನ್ನ, ತ್ರಿಪುರ ಸಂಹಾರದಿಂದ ಮುನ್ನ, ಹರಿವಿರಿಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ, ಮುನ್ನ, ಮುನ್ನ, ಅಂದಿಂಗೆಳೆಯ ನೀನು, ಹಳೆಯ ನಾನು, ಮಹಾದಾನಿ ಕೂಡಲಸಂಗಮದೇವಾ.

ಕಂಕಾಳ = ಬೆನ್ನೆಲುವು; ವಿರಿಂಚಿ = ಬ್ರಹ್ಮ; ಕಲ್ಯಾಣ = ಲಗ್ನ; ಹಳೆಯ = ಪುರಾತನನು.

ಭಾವಃ— ಕಾಳಿಕಾದೇವಿಯ ಕೈಯ್ಯಲ್ಲಿ ಬೆನ್ನೆಲುವು ಬರುವವರ ಮೊದಲು, ತ್ರಿಪುರವನ್ನು ಶಿವನು ನಾಶಮಾಡುವವರ ಮೊದಲು, ಬ್ರಹ್ಮ ವಿಷ್ಣುಗಳು ತೋರುವ ಮೊದಲು, ಪಾರ್ವತಿಯು ಲಗ್ನವಾದುದರ ಮೊದಲು, ಈ ಎಲ್ಲವುಗಳು ಸಂಭವಿಸುವದರ ಮೊದಲು, ಮೊದಲು, ಮೊದಲು, ನೀನು ಅಸ್ತಿತ್ವದಲ್ಲಿದ್ದೀ. ಮತ್ತು ನಿನ್ನಷ್ಟೇ ಪುರಾತನನು ನಾನೂ ಇದ್ದೇನೆ.

ದೇವರು ಒಬ್ಬನೇ ಇದ್ದಾನೆ.

(೧೪) ಸ್ವಾಮಿ ನೀನು. ಶಾಶ್ವತ ನೀನು. ಎತ್ತಿದೆ ಬಿರಿದ ಜಗವೆಲ್ಲರಿಯಲು. ಮಹಾದೇವ ಮಹಾದೇವ ಇಲ್ಲಿಂದ ಮೇಲೆ ಶಬ್ದವಿಲ್ಲ. ಪಶುಪತಿ ಜಗಕ್ಕೆ ಏಕೋದೇವ. ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೇ ದೇವ ಕೂಡಲಸಂಗಮದೇವಾ.

ಶಾಶ್ವತ = ಯಾವಾಗಲೂ ಇರುವವ.

ಭಾವಃ— ಎಲೋ ಪರಮಾತ್ಮನೇ ನೀನು ಜಗತ್ತಿಗೆಲ್ಲ ಒಡೆಯನು. ನೀನೇ ಶಾಶ್ವತನು. ಈ ನಿನ್ನ ಬಿರುದನ್ನೆತ್ತಿ ಎಲ್ಲರಿಗೂ ತಿಳಿಯುವಂತೆ ನಾನು ಸಾರಿ ಸಾರಿ ಹೇಳುತ್ತೇನೆ. 'ಮಹಾದೇವ, ಮಹಾದೇವ' ಈ ಶಬ್ದವನ್ನು ಬಿಟ್ಟು ಬೇರೆ ಯಾವ ಶಬ್ದವೂ ಇಲ್ಲ. ಪಶುಪತಿಯೊಬ್ಬನೇ ಜಗಕ್ಕೆಲ್ಲ ದೇವನು. ಸ್ವರ್ಗ, ಮರ್ತ್ಯ, ಪಾತಾಳದೊಳಗೆಲ್ಲ ಒಬ್ಬನೇ ದೇವನಿದ್ದಾನೆ.

(೧೫) ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡವೋ. ದೇವ ಒಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿ ನೋಡಾ. ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ.

ಭಾವಃ— ದೇವರು ಇಬ್ಬರಿದ್ದಾರೆ, ಮೂವರಿದ್ದಾರೆ ಎಂದು ಉಬ್ಬಿ, ಉಬ್ಬಿ ನೀವು ಮಾತನಾಡಬೇಡಿರಿ. ಯಾಕಂದರೆ ದೇವರು ಒಬ್ಬನೇ ಇದ್ದಾನೆ. ದೇವರು ಇಬ್ಬರಿದ್ದಾರೆಂಬುದು ಸುಳ್ಳು. ವೇದಗಳು ಸಹ ಪರಮಾತ್ಮನಲ್ಲದೆ ಬೇರೆ ಯಾರೂ ಇಲ್ಲವೆಂದು ಹೇಳುತ್ತಿವೆ.

(೧೬) ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದರೆ ತಲೆದಂಡ. ಹುಸಿಯಾದರೆ, ದೇವಾ ತಲೆದಂಡ. ಕೂಡಲಸಂಗಮದೇವ, ನೀವಲ್ಲದೆ ಅನ್ಯವ ನೆನೆದರೆ ತಲೆದಂಡ ತಲೆದಂಡ.

ಜಾಗ್ರತ್ = ಎಚ್ಚರಿಕೆ; ಸುಷುಪ್ತಿ = ದೀರ್ಘ ನಿದ್ರೆ.

ಭಾವಃ— ಎಲೋ ಪರಮಾತ್ಮನೇ, ನಾನು ಎಚ್ಚರಿರಲಿ, ಸ್ವಪ್ನಾವಸ್ಥೆಯಲ್ಲಿರಲಿ, ಅಥವಾ ಗಾಢನಿದ್ರೆಯಲ್ಲಿರಲಿ, ನಿನ್ನ ಹೊರತು ಮತ್ತೊಂದನ್ನು ನೆನೆಯಲಾರೆನು. ಒಂದು ವೇಳೆ ನಾನು ನೆನೆದರೆ, ನನ್ನ ತಲೆಯನ್ನು ನಿನಗೆ ದಂಡವಾಗಿ ಕೊಡುತ್ತೇನೆ. ಇದರಲ್ಲಿ ಎಷ್ಟುಮಾತ್ರವೂ ನಾನು ಸುಳ್ಳಾಡುವದಿಲ್ಲ. ನಿನ್ನನ್ನು ಬಿಟ್ಟು ಬೇರೊಂದನ್ನು ನಾನು ನೆನೆದರೆ, ನನ್ನ ತಲೆಯನ್ನು ನಿನಗೆ ನಿಶ್ಚಯಪೂರ್ವಕವಾಗಿ ದಂಡಕೊಡುತ್ತೇನೆ.

(೧೭) ಗುಡಿಯೊಳಗಿರ್ದು ಗುಡಿಯ ನೇಣ ಕೊಯ್ದರೆ ಗುಡಿಯ ದಡಿ ಬಿದ್ದು ಹಲ್ಲು ಹೋಹುದು ನೋಡಾ. ಪೊಡವಿಗೀಶ್ವರನ ಗರ್ಭವಾಸದೊಳಗಿರ್ದು ನುಡಿವರು ಮತ್ತೊಂದು ದೈವವುಂಟೆಂದು. ತುಡುಗುಣಿ ನಾಯ ಪಿಡಿತಂದು ಸಾಕಿದರೆ, ತನ್ನೊಡೆಯಂಗೆ ಬೊಗಳುವಂತೆ ಕಾಣಾ ಕೂಡಲಸಂಗಮದೇವ.

ಗುಡಿ = ಗುಡಾರ, ಡೇರೆ; ನೇಣು = ಹಗ್ಗ; ದಡಿ = ಮಧ್ಯ ಕಂಭ; ಪೊಡವಿ = ಭೂಮಿ; ಪಿಡಿತಂದು = ಹಿಡಿದುತಂದು.

ಭಾವಃ— ನಾನು ಒಂದು ಗುಡಾರದ ಆಶ್ರಯದಲ್ಲಿದ್ದಾಗ ಅದರ ಹಗ್ಗನ್ನು ಕೊಯ್ದು ಬಿಟ್ಟರೆ, ಅದರ ನಡುವಿನ ಕಂಭವು ನನ್ನ ಮೇಲೆ ಬಿದ್ದು, ನನ್ನ ಹಲ್ಲು ಮುರಿದು ಹೋಗುವವು. ಜಗತ್ತಿಗೆ ಒಡೆಯನಾದ ಪರಮಾತ್ಮನ ಆಶ್ರಯದಲ್ಲಿ ನಾನು ಇದ್ದರೂ, ಇನ್ನೊಬ್ಬ ದೇವನಿದ್ದಾನೆಂದು ನುಡಿಯುತ್ತೇನೆ. ಹೀಗೆ ನುಡಿದದ್ದಾದರೆ ತುಡುಗುಣಿ ನಾಯನ್ನು ತಂದು ಸಾಕಿದಲ್ಲಿ, ಅದು ಹೇಗೆ ತನ್ನನ್ನು ಸಾಕಿದವನಿಗೆಯೇ ಬೊಗಳುತ್ತದೋ, ಹಾಗೆ ನಾನು ವರ್ತಿಸಿದಂತೆ ಸರಿ.

(೧೮) ಹಲವು ಕೊಂಬೆಗೆ ಹಾಯಲು ಬೇಡ. ಬಡುಕಾಯಕ್ಕೆ ನೀಡಲು ಬೇಡ. ಲೋಗರಿಗೆ ಕೊಟ್ಟು, ಭೃಮಿತನಾಗಬೇಡ. ಆಚಾರವೆಂಬುದು ಹಾವಸೆಗಲ್ಲು. ಭಾವ ತಪ್ಪಿದ ಬಳಿಕ ಏನ್ಯೈದಡಾಗದು. ಅಂಜದಿರು. ಅಳುಕದಿರು. ಪರದೈವಕ್ಕೆರಗದಿರು. ಕೂಡಲಸಂಗನ ಕೆಯ್ಯಲು ಈಸುವುದೆನ್ನ ಭಾರ.

ಬರುಕಾಯ = ಹುರುಳಿಲ್ಲದ ಶರೀರ; ಲೋಗರು = ಸಾಮಾನ್ಯ ಜನರು; ಏಗೈದಡಾಗದು = ಏನು ಮಾಡಿದರೂ ಆಗದು; ಅಳುಕು = ಬೆದರು; ಈಸುವುದು = ಇಡುವದು.

ಭಾವಃ— ನೀನು ಕುರುಡನಂತೆ ಹಲವು ಕೊಂಬೆಗಳಿಗೆ ಹಾಯುತ್ತ ಹೋಗಬೇಡ. ಹುರುಳಿಲ್ಲದ ದೇವತೆಗಳಿಗೆ ನೀಡುತ್ತ ಹೋಗಬೇಡ. ಸಿಕ್ಕ ಸಿಕ್ಕ ಜನರಿಗೆ ಕೊಟ್ಟು ಕೊಟ್ಟು ಹುಚ್ಚನಂತಾಗಬೇಡ. ಸದಾಚಾರವೆಂಬುದು ಹಾವಸೆಗಲ್ಲಿನಂತಿದೆ. ಅದರ ಮೇಲೆ ಎಚ್ಚರದಿಂದ ನಡಿಯಬೇಕು. ನೀನು ನಡೆಯುವಲ್ಲಿ ತಪ್ಪಿದರೆ ಏನು ಮಾಡಿದರೂ ಆಗದು. ಎಲೋ ಜನರುಗಳೇ, ಅಂಜಬೇಡಿರಿ, ಬೆದರಬೇಡಿರಿ. ಪರದೈವಕ್ಕೆ ಅಡ್ಡ ಬೀಳಬೇಡಿರಿ. ಪರಮಾತ್ಮನೊಬ್ಬನಲ್ಲಿಯೇ ನಂಬಿಗೆಯನ್ನಿಟ್ಟು ನಡೆಯರಿ. ಈ ಪ್ರಕಾರ ಬಸವೇಶ್ವರನು ಇಲ್ಲಿ ಎಚ್ಚರು ಹೇಳುತ್ತಾನೆ.

(೧೯) ನೀನಲ್ಲದೆ ಅನ್ಯ ದೈವ ಉಂಟೆಂಬವನ ಬಾಯ ಕೆನ್ನೆವಾರೆ ಸೀಳಿದಲ್ಲದೆ, ಎನ್ನ ಮುನಿಸು ಹೋಗದಯ್ಯಾ, ಎನ್ನ ಕೋಪವಡಗದಯ್ಯಾ. ಎನ್ನ ಬಿನ್ನಪವನವಧರಿಸು ಕೂಡಲಸಂಗಮದೇವ.

ಕೆನ್ನೆವಾರೆ = ಗಲ್ಲದವರೆಗೆ; ಮುನಿಸು = ಸಿಟ್ಟು; ಬಿನ್ನಪ = ವಿನಂತಿ; ಅವಧರಿಸು = ಲಕ್ಷಿಸು.

ಭಾವಃ— ಎಲೋ ಪರಮಾತ್ಮನೇ, ನೀನಲ್ಲದೆ ಇನ್ನೊಬ್ಬ ದೇವರಿದ್ದಾನೆಂದು ಅನ್ನುವಂಥವರ ಬಾಯನ್ನು ಗಲ್ಲದ ವರೆಗೆ ಸೀಳದ ಹೊರ್ತು ನನ್ನ ಸಿಟ್ಟು ಹೋಗದು, ನನ್ನ ಕೋಪವು ಅಡಗದು. ಈ ನನ್ನ ಬಿನ್ನಹವನ್ನು ಲಕ್ಷಿಸು ಎಂದು ಬಸವೇಶ್ವರನು ಪರಮಾತ್ಮನಲ್ಲಿ ಕೇಳಿಕೊಳ್ಳುತ್ತಾನೆ.

(೨೦) ಶಿವಲೋಕಕ್ಕೆ ಸರಿ ಬೇರೆ ಲೋಕವಿಲ್ಲ. ಶಿವಮಂತ್ರಕ್ಕೆ ಸರಿ ಬೇರೆ ಮಂತ್ರವಿಲ್ಲ. ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ, ಕೂಡಲಸಂಗಯ್ಯನೊಬ್ಬನೇ ದೈವವೆಂದು.

ಮುಂಡಿಗೆ = ಪ್ರತಿಜ್ಞೆಯ ಒಂದು ಚಿನ್ಹ, ಪ್ರತಿಜ್ಞೆ.

ಭಾವಃ— ಶಿವಲೋಕಕ್ಕೆ ಸರಿಯಾದ ಲೋಕವು ಬೇರೆ ಯಾವದೂ ಇಲ್ಲ, ಶಿವಮಂತ್ರಕ್ಕೆ ಸರಿಯಾದ ಮಂತ್ರವು ಬೇರೆ ಯಾವದೂ ಇಲ್ಲ,

ಪರಮಾತ್ಮನೊಬ್ಬನ ಹೊರ್ತು ಬೇರೆ ಯಾವ ದೇವರೂ ಇಲ್ಲ, ಹೀಗೆ ನಾನು ಜಗತ್ತಿನ ಮುಂದೆ ಪ್ರತಿಜ್ಞೆ ಮಾಡಿ ಹೇಳುತ್ತೇನೆ. ಇದು ಸುಳ್ಳೆಂದು ಸಿದ್ಧಮಾಡುವವರು ಯಾರಾದರೂ ಇದ್ದರೆ, ಅವರು ಮುಂದೆ ಬರಬೇಕೆಂದು ಬಸವೇಶ್ವರನು ಇಲ್ಲಿ ಆಹ್ವಾನವನ್ನಿತ್ತಿದ್ದಾನೆ.

(೨೧) ಬಿದಿರೆಲೆಯ ಮೆಲಿದರೆ ಮೆಲಿದಂತಲ್ಲದೆ, ರಸವನು ಹಡೆಯಲು ಬಾರದು. ನೀರ ಕಡೆದರೆ ಕಡೆದಂತಲ್ಲದೆ, ಬೆಣ್ಣೆಯ ಹಡೆಯಲು ಬಾರದು. ಮಳಲ ಹೊಸೆದರೆ ಹೊಸೆದಂತಲ್ಲದೆ, ಸರವೆಯ ಹಡೆಯಲು ಬಾರದು. ನಮ್ಮ ಕೂಡಲಸಂಗಮದೇವನಲ್ಲದೆ ಅನ್ಯ ದೈವಕ್ಕೆರಗಿದರೆ, ಹೊಳ್ಳ ಕುಟ್ಟಿ ಕೈ ಹೊಟ್ಟಾದಂತಾಯಿತ್ತಯ್ಯ.

ಮಳಲು = ಉಸಿಕು; ಸರವೆ = ಹಗ್ಗ; ಹೊಳ್ಳು = ಪೊಳ್ಳಾದ ಪದಾರ್ಥ.

ಭಾವಃ— ಬಿದಿರಿನ ಎಲೆಯನ್ನು ತಿಂದರೆ, ತಿನ್ನುವ ಶ್ರಮವೇ ಹೊರ್ತು ಅದರಲ್ಲಿ ರಸವು ಏನೂ ಹೊರಡಲಾರದು. ನೀರನ್ನು ಕಡೆದರೆ, ಕಡೆದ ಶ್ರಮವೇ ಹೊರ್ತು ಅದರಲ್ಲಿ ಬೆಣ್ಣೆಯಾಗಲಾರದು. ಉಸಿಕನ್ನು ಹೊಸೆಯುತ್ತ ಕುಳಿತರೆ, ಹೊಸೆದ ಶ್ರಮವೇ ಹೊರ್ತು ಅದರಿಂದ ಹಗ್ಗವಾಗಲಾರದು. ನಮ್ಮ ಪರಮಾತ್ಮನನ್ನು ಬಿಟ್ಟು ಬೇರೆ ದೇವತೆಗಳಿಗೆ ಎರಗಿದರೆ, ಪೊಳ್ಳು ಪದಾರ್ಥವನ್ನು ಕುಟ್ಟಿದರೆ, ಕುಟ್ಟಿ ಕೈ ಮಾತ್ರ ನೋವಾಗುವದೇ ಹೊರ್ತು ಬೇರೊಂದು ಫಲವಿಲ್ಲ.

(೨೨) ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ. ನಂಬ ಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ. ಬೇಡ, ಬೇಡ. ಅನ್ಯ ದೈವದ ಸಂಗ ಬೇಡ, ಹೊಲ್ಲ. ಬೇಡ, ಬೇಡ, ಅನ್ಯ ದೈವವೆಂಬುದು ಹಾದರ ಕಾಣಿರೋ. ಕೂಡಲಸಂಗಮದೇವ ಕಂಡರೆ, ಮೂಗ ಕೊಯ್ವ ಕಾಣಿರೋ.

ಹೊಲ್ಲ = ಅಯೋಗ್ಯವು.

ಭಾವಃ— ಪತಿವ್ರತೆಗೆ ಒಬ್ಬನೇ ಗಂಡ, ಕಾಣಿರೋ. ಹಾಗೆಯೇ ವಿಶ್ವಾಸವುಳ್ಳ ಭಕ್ತನಿಗೆ ಒಬ್ಬನೇ ದೇವರು, ಕಾಣಿರೋ. ಬೇರೆ ದೇವತೆಗಳ ಸಂಗವು ಬೇಡ. ಅದು ಸರಿಯಾದುದಲ್ಲ. ಬೇರೆ ದೇವತೆಗಳ ಸಂಗವು ಹಾದರ ಕಾಣಿರೋ. ಪರಮಾತ್ಮನು ಅಂಥವರನ್ನು ಕಂಡರೆ ಮೂಗ ಕೊಯ್ಯುವನು ಕಾಣಿರೋ.

(೨೩) ಕಂಡ ಕಂಡವರನೆಲ್ಲ ಗಂಡರೆಂಬ ಡಿಂಡೆಯನವಳ ಸಜ್ಜನೆ ಎನಬಹುದೇ? ಲಿಂಗಪ್ರಸಾದವನುಂಡು, ಅನ್ಯ ದೈವಂಗಳ ಕೊಂಡಾಡುವವರ ನಮ್ಮ ಕೂಡಲ ಸಂಗಮದೇವನು ಆ ಭಂಡರಿಗೆ ಮಾಡಿದ ಹುಳುಗೊಂಡವನು.

ಡಿಂಡೆ = ಅಯೋಗ್ಯ ವರ್ತನೆಯುಳ್ಳವಳು.

ಭಾವಃ— ಕಂಡ ಕಂಡವರೆಲ್ಲ ತನ್ನ ಗಂಡರೆಂದು ಹೇಳುವ ಜಾರೆಯು ಸಜ್ಜನೆಯೆಂದು ಯಾರಾದರೂ ಹೇಳಬಹುದೇ? ಲಿಂಗದ ಪ್ರಸಾದವನ್ನುಂಡು, ಬೇರೆ ದೇವತೆಗಳನ್ನು ಸ್ತುತಿಸುವಂಥವರನ್ನು ನಮ್ಮ ಪರಮಾತ್ಮನು ಹುಳುವಿನ ಕೊಂಡದಲ್ಲಿ ಹಾಕುವನು.

(೨೪) ದೇವನೊಬ್ಬನೇ, ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದರೆ ಕಿವಿ ಮೂಗ ಕೊಯ್ವನು. ಹಲವು ದೈವದ ಎಂಜಲ ತಿಂಬುವರನೇನೆಂಬೆ ಕೂಡಲಸಂಗಮದೇವಾ?

ಎರಗು = ನಮಸ್ಕಾರ ಮಾಡು.

ಭಾವಃ— ದೇವರು ಒಬ್ಬನೇ ಇದ್ದಾನೆ. ಆದರೆ ಅವನ ಹೆಸರುಗಳು ಮಾತ್ರ ಅನೇಕವಿವೆ. ಹಾಗೆಯೇ ಶ್ರೇಷ್ಠಳಾದ ಪತಿವ್ರತಾ ಸ್ತ್ರೀಯಳಿಗೆ ಗಂಡನೊಬ್ಬನೇ ಇದ್ದಾನೆ. ಅವನನ್ನು ಬಿಟ್ಟು ಅವಳು ಬೇರೊಬ್ಬನನ್ನು ಸೇವಿಸಿದರೆ, ಮೊದಲಿನ ಗಂಡನು ಆಕೆಯ ಕಿವಿ, ಮೂಗನ್ನು ಕೊಯ್ದುಹಾಕದೆ ಬಿಡನು. ಹಾಗೆಯೇ ಹಲವು ದೇವತೆಗಳಿಗೆ ನೈವೇದ್ಯ ಮಾಡಿ ಅದನ್ನು ಉಂಡರೆ, ಅದು ಎಂಜಲವು. ಹೀಗೆ ನಡೆಯುವವರಿಗೆ ನಾನೇನು ಅನ್ನಲಿ?

(೨೫) ಉಣಿಸುವ ಉಡಿಸುವ ಗಂಡನಿದ್ದಂತೆ ಜೋಡೆ ಮಿಂಡಂಗೆ ಕಣ್ಣ ಚೆಲ್ಲುವಳ ಕೇಡಿಂಗೆ ಬೆರಗಾದೆ ನಾನು. ಕೂಡಲಸಂಗಮದೇವ ಸಿಂಗಾರದ ಮೂಗನು ಬಣ್ಣಿಸಿ ಹಲುದೋರೆ ಕೊಯ್ವ.

ಜೋಡೆ = ವ್ಯಭಿಚಾರಿಯಾದ ಸ್ತ್ರೀ.

ಭಾವಃ— ಒಬ್ಬ ವ್ಯಭಿಚಾರಿಯಾದ ಸ್ತ್ರೀಯಳು ತನಗೆ ಉಣ್ಣಲಿಕ್ಕೆ ಆಹಾರವನ್ನು ಮತ್ತು ಹೊದೆಯಲಿಕ್ಕೆ ಬಟ್ಟೆಯನ್ನು ಕೊಡುವ ಗಂಡನಿರುತ್ತಿರಲು ಅವನನ್ನು ಬಿಟ್ಟು ಬೇರೊಬ್ಬ ಮಿಂಡನಿಗೆ ಮನ ಸೋತರೆ ಅವಳ ಕೆಡಕು ಸ್ಥಿತಿಯನ್ನು ನೋಡಿ ನಾನು ಬೆರಗಾಗುತ್ತೇನೆ.

ಆಕೆಗೆ ಸುಂದರವಾದ ಮೂಗು ಇದ್ದರೂ ಅದನ್ನು ಪರಮಾತ್ಮನು ಹಲ್ಲುಗಳು ಕಾಣುವಂತೆ ಮತ್ತು ಎಲ್ಲರಿಗೂ ತಿಳಿಯುವಂತೆ ಕೊಯ್ದುಹಾಕಿ ಬಿಡುವನು.

ಬ್ರಹ್ಮ ವಿಷ್ಣು ರುದ್ರರಲ್ಲಾರೂ ಪರಮಾತ್ಮನಲ್ಲ.

(೨೬) ಉಮಾದಿನಾಥರು ಕೋಟಿ. ಪಂಚ ವಕ್ತ್ರರು ಕೋಟಿ. ನಂದಿವಾಹನರೊಂದು ಕೋಟಿ ನೋಡಯ್ಯ. ಸದಾಶಿವರೊಂದು ಕೋಟಿ. ಗಂಗೆವಾಳುಕಸಮ ರುದ್ರರು. ಇವರೆಲ್ಲರೂ ಕೂಡಲಸಂಗನ ಸಾನ್ನಿಧ್ಯರಲ್ಲದೆ ಸಮರಸವೇದ್ಯರೊಬ್ಬರೂ ಇಲ್ಲ.

ಆದಿನಾಥ = ಒಡೆಯ; ಪಂಚವಕ್ತ್ರರು = ಐದು ಮುಖವುಳ್ಳವರು; ವಾಳುಕ = ಉಸಿಕು; ಸಾನ್ನಿಧ್ಯರು = ಸಮೀಪ ಇರುವವರು; ವೇದ್ಯರು = ಜ್ಞಾನವುಳ್ಳವರು.

ಭಾವಃ— ಉಮಾಪತಿಗಳು ಅಂದರೆ ಪರಮೇಶ್ವರರು ಒಂದು ಕೋಟಿ ಜನರಿದ್ದಾರೆ. ಐದು ಮುಖವುಳ್ಳವರು ಸಹ ಒಂದು ಕೋಟಿ ಜನರಿದ್ದಾರೆ. ನಂದಿವಾಹನರೂ ಒಂದು ಕೋಟಿ ಇದ್ದಾರೆ. ಸದಾಶಿವರೂ ಒಂದು ಕೋಟಿ ಇದ್ದಾರೆ. ರುದ್ರರು ಗಂಗಾನದಿಯ ದಂಡೆಯ ಮೇಲಿರುವ ಉಸಿಕಿನ ಕಣಗಳಷ್ಟು ಜನರು ಇದ್ದಾರೆ. ಆದರೆ ಇವರೆಲ್ಲರೂ ಪರಮಾತ್ಮನ ಸಮೀಪದಲ್ಲಿ ಇರುವವರೇ ಹೊರ್ತು ಅವನೊಡನೆ ಸಮರಸಭಾವವನ್ನು ಹೊಂದಿದ ಜ್ಞಾನಿಗಳೊಬ್ಬರೂ ಇಲ್ಲ. ಇವರು ದೇವರಲ್ಲೆಂಬ ಭಾವವು ಇದರಲ್ಲಿದೆ.

(೨೭) ಆರು ಕೋಟಿ ಬ್ರಹ್ಮರು ಮಡಿವಲ್ಲಿ, ನಾರಾಯಣಂಗೆ ಒಂದು ದಿನವಾಯಿತ್ತು. ನಾರಾಯಣರೊಂದು ಕೋಟಿ ಮಡಿವಲ್ಲಿ, ರುದ್ರನ ಕಣ್ಣೆವೆ ಹಳಚಿತ್ತು. ರುದ್ರಾವತಾರ ಹಲವಳಿವಲ್ಲಿ, ನಮ್ಮ ಕೂಡಲಸಂಗಮದೇವನೇನೆಂದು ಅರಿಯ.

ಹಳಚು = ಅಲುಗಾಡು.

ಭಾವಃ— ಆರು ಕೋಟಿ ಬ್ರಹ್ಮರು ಹುಟ್ಟಿ ಸತ್ತು ಹೋಗುವ ಅವಧಿಯಲ್ಲಿ ನಾರಾಯಣನಿಗೆ ಒಂದು ದಿನ ಮಾತ್ರವಾಗುತ್ತದೆ. ಇಂಥ

ನಾರಾಯಣರು ಒಂದು ಕೋಟಿ ಜನರು ಹುಟ್ಟಿ ಸತ್ತು ಹೋಗುವ ಅವಧಿಯಲ್ಲಿ ರುದ್ರನ ಕಣ್ಣಿನ ಸ್ವಲ್ಪಮಾತ್ರ ಅಲುಗಾಡುತ್ತದೆ. ಇಂಥ ಹಲವು ರುದ್ರಾವತಾರಗಳು ಆಗಿಹೋದರೂ ಕೂಡ ನಮ್ಮ ಪರಮಾತ್ಮನಿಗೆ ಅದು ಏನು ಆಯಿತು ಎಂಬುದು ಸಹ ಗೊತ್ತಾಗುವದಿಲ್ಲ. ಅಂದರೆ ಪರಮಾತ್ಮನಿಗೆ ಕಾಲದ ಅವಧಿ ಇಲ್ಲವೆಂಬ ಭಾವವು ಇದರಲ್ಲಿದೆ.

ಬ್ರಹ್ಮ ವಿಷ್ಣುಗಳೆಲ್ಲಾರೂ ಪರಮಾತ್ಮನಲ್ಲ.

(೩೮) ಒಬ್ಬ ಕೆಂಚ, ಒಬ್ಬ ಕರಿಕ, ಒಬ್ಬ ಶುದ್ಧ ಧವಳಿತನೆಂತಯ್ಯ ಲಿಂಗವೇ? ಒಬ್ಬರಿಗೊಬ್ಬರು ಘನವೆಂಬರು. ಅದೆಂತಯ್ಯ? ಒಬ್ಬರಿಗೊಬ್ಬರು ಕಿರಿದೆಂಬರು. ಎಂತಯ್ಯ? ಬ್ರಹ್ಮಂಗೆ ಪ್ರಳಯ, ವಿಷ್ಣುವಿಂಗೆ ಮರಣ ಉಂಟು. ಕೂಡಲಸಂಗಮದೇವಂಗಿಲ್ಲ.

ಕೆಂಚ = ಕೆಂಪು ಬಣ್ಣದವ; ಕರಿಕ = ಕಪ್ಪು ಮನುಷ್ಯ; ಧವಳಿತ = ಬಿಳೀ ಮನುಷ್ಯ.

ಭಾವಃ— ಎಲೋ ಪರಮಾತ್ಮನೇ, ಜನರು ದೇವರ ಬಣ್ಣವು ಕೆಂಪು, ಕಪ್ಪು, ಬಿಳಿದು ಎಂದು ಹೇಳುತ್ತಾರೆ. ಇದು ಹೇಗಾದೀತು? ಒಬ್ಬ ದೇವರು ಇನ್ನೊಬ್ಬನಿಗಿಂತ ದೊಡ್ಡವನೆಂದು ಹೇಳುತ್ತಾರೆ. ಇದು ಹೇಗಾದೀತು? ಒಬ್ಬ ದೇವರು ಇನ್ನೊಬ್ಬನಿಗಿಂತ ಕಡಿಮೆ ಎಂದು ಹೇಳುತ್ತಾರೆ. ಇದು ಹೇಗಾದೀತು? ಬ್ರಹ್ಮನಿಗೆ ನಾಶವಿದೆ, ವಿಷ್ಣುವಿಗೆ ಮರಣವಿದೆ. ಆದರೆ ಪರಮಾತ್ಮನಿಗೆ ಇವಾವೂ ಇಲ್ಲ.

(೩೯) ಹುಟ್ಟಿಸುವಾತ ಬ್ರಹ್ಮನೆಂಬರು. ರಕ್ಷಿಸುವಾತ ವಿಷ್ಣುವೆಂಬರು ನೋಡಾ. ಬ್ರಹ್ಮ ತನ್ನ ಶಿರವನೇಕೆ ಹುಟ್ಟಿಸಲಾರ? ವಿಷ್ಣು ತನ್ನ ಮಗನನೇಕೆ ರಕ್ಷಿಸಲಾರ? ದುಷ್ಟನಿಗ್ರಹ ಶಿಷ್ಟಪರಿಪಾಲಕ ನಮ್ಮ ಕೂಡಲಸಂಗಮದೇವ.

ಶಿಷ್ಟ = ಒಳ್ಳೆಯವ.

ಭಾವಃ— ಹುಟ್ಟಿಸುವಾತ ಬ್ರಹ್ಮನೆಂದು ಹೇಳುತ್ತಾರೆ. ರಕ್ಷಿಸುವಾತ ವಿಷ್ಣುವು ಎಂದು ಹೇಳುತ್ತಾರೆ. ಆದರೆ ಬ್ರಹ್ಮನು ತಾನು ಕಡಿಸಿಕೊಂಡ

ತಲೆಯನ್ನು ಏಕೆ ಹುಟ್ಟಿಸಿಕೊಳ್ಳಲಾರದೆ ಹೋದ? ವಿಷ್ಣುವು ತನ್ನ ಮಗನನ್ನು ಕೊಲ್ಲುವಾಗ ಅವನನ್ನು ರಕ್ಷಿಸಿಕೊಳ್ಳುವದು ಅವನಿಗೇಕೆ ಆಗಲಿಲ್ಲ? ದುಷ್ಟ ಜನರನ್ನು ಸಂಹಾರ ಮಾಡುವವ ಮತ್ತು ಉತ್ತಮರನ್ನು ಸಂರಕ್ಷಿಸುವವ ನಮ್ಮ ಪರಮಾತ್ಮನೊಬ್ಬನೇ ಹೊರ್ತು ಬೇರೆ ಯಾರೂ ಇಲ್ಲ.

(೪೦) ವಿಷ್ಣು ಬಲ್ಲಿದನೆಂಬೆನೆ? ದಶಾವತಾರದಲ್ಲಿ ಭಂಗ ಬಟ್ಟುದಕೆ ಕಡೆ ಇಲ್ಲ. ಬ್ರಹ್ಮ ಬಲ್ಲಿದನೆಂಬೆನೆ? ಶಿರವ ಹೋಗಾಡಿ ನಾನಾ ವಿಧಿಗೊಳಗಾದ. ವೇದ ಬಲ್ಲಿತ್ತೆಂಬೆನೆ? ನಾನಾ ಮುಖದಲ್ಲಿ ಸ್ತುತಿಸಿತಲ್ಲದೆ, ಲಿಂಗದ ನಿಲುಕಡೆಯ ಕಾಣದು. ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದಕ್ರಿ. ಪುರಾಣ ಬಲ್ಲಿತ್ತೆಂಬೆನೆ? ಪೂರ್ವಕ್ರಿ. ಆಗಮ ಬಲ್ಲಿತ್ತೆಂಬೆನೆ? ವಾಯುವ ಹೊಂದಿತ್ತು. ಇದು ಕಾರಣ ಕೂಡಲ ಸಂಗಮದೇವನೇ ನಿತ್ಯ. ಉಳಿದ ದೈವವೆಲ್ಲ ಅನಿತ್ಯ ಕಾಣಿರೋ.

ಬಲ್ಲಿದ = ಬಲಿಷ್ಠ; ಭಂಗ = ಅವಮಾನ; ವಿಧಿ = ಪರಿಸ್ಥಿತಿ, ಕಷ್ಟ.

ಭಾವಃ— ವಿಷ್ಣುವು ಶಕ್ತಿವಂತನೆಂದು ಹೇಳಬಹುದೇ? ಆದರೆ ಅವನ ಹತ್ತು ಅವತಾರಗಳಲ್ಲಿ ಅವನಿಗಾದ ಅಪಮಾನಗಳ ಸಂಖ್ಯೆಗೆ ಮಿತಿಯೇ ಇಲ್ಲ. ಬ್ರಹ್ಮನು ಸಮರ್ಥನೆಂದು ಹೇಳಬಹುದೇ? ಅವನು ತನ್ನ ಶಿರಸ್ಸನ್ನು ಕಳೆದುಕೊಂಡು, ಅನೇಕ ಕಷ್ಟಗಳಿಗೆ ಈಡಾದನು. ವೇದಗಳು ಸಾಮರ್ಥ್ಯವುಳ್ಳವೆಂದು ಹೇಳಬಹುದೇ? ಅವು ಪರಮಾತ್ಮನನ್ನು ಅನೇಕ ರೀತಿಯಾಗಿ ಸ್ತುತಿಸುತ್ತವೆಯೇ ಹೊರ್ತು ಅವನ ಸ್ವರೂಪವನ್ನು ಅರಿಯವು. ಶಾಸ್ತ್ರಗಳು ಸಾಮರ್ಥ್ಯವುಳ್ಳವೆಂದು ಹೇಳಬಹುದೇ? ಅವು ಬರೀ ಶಬ್ದಗಳು. ಪುರಾಣಗಳು ಸಾಮರ್ಥ್ಯವುಳ್ಳವೆಂದು ಹೇಳಬಹುದೇ? ಅವು ಹಿಂದೆ ಆಗಿಹೋದ ಸಂಗತಿಗಳನ್ನು ಮಾತ್ರ ಹೇಳುತ್ತವೆ. ಆಗಮಗಳು ಸಾಮರ್ಥ್ಯವುಳ್ಳವೆಂದು ಹೇಳಬಹುದೇ? ಅವು ಗಾಳಿಯಂತೆ ಕ್ಷಣಿಕವಾದವುಗಳು. ಆದ್ದರಿಂದ ಪರಮಾತ್ಮನೊಬ್ಬನೇ ನಿತ್ಯ, ಉಳಿದ ದೇವರುಗಳೆಲ್ಲವೂ ಅನಿತ್ಯವಾದವುಗಳು.

(೪೧) ಮರೆಯಲಾಗದೆ ಹರಿಯ? ಮರೆಯಲಾಗದೆ ಬ್ರಹ್ಮನ? ಮರೆಯಲಾಗದೆ ತೆತ್ತೀಸ ಕೋಟಿ ದೇವರ್ಕಳ? ನಮ್ಮ ಕೂಡಲಸಂಗಮದೇವರ ಮರೆಯಬಹುದೇ?

ಭಾವಃ— ವಿಷ್ಣುವನ್ನು ನೀವು ಏಕೆ ಮರೆಯಬಾರದು ? ಬ್ರಹ್ಮನನ್ನು ನೀವು ಏಕೆ ಮರೆಯಬಾರದು ? ಮೂವತ್ತುಮೂರು ಕೋಟಿ ದೇವರುಗಳನ್ನು ನೀವು ಏಕೆ ಮರೆಯಬಾರದು ? ಆದರೆ ನೀವು ನಮ್ಮ ಪರಮಾತ್ಮನನ್ನು ಮರೆಯಬಹುದೇ ?

(೩೨) ಹರಿಹರನೊಂದೇ ಎಂದರೆ ಸುರಿಯವೇ ಬಾಯಲ್ಲಿ ಬಾಲ ಹುಳುಗಳು ? ಹರಿಗೆ ಹತ್ತು ಪ್ರಳಯ, ಬ್ರಹ್ಮಂಗನಂತ ಪ್ರಳಯ. ಹರಂಗೆ ಪ್ರಳಯವುಂಟೆಂಬುದ ಬಲ್ಲರೆ ನೀವು ಹೇಳಿರೋ ? ಪ್ರಳಯ ಪ್ರಳಯ ಅಂದಂದಿಂಗೆ ಹಳೆಯ ನಮ್ಮ ಕೂಡಲಸಂಗಮದೇವ.

ಹಳೆಯ = ಹಿಂದಿನವ.

ಭಾವಃ— ಹರಿಹರರು ಒಂದೇ ಎಂದರೆ ನಿಮ್ಮ ಬಾಯಲ್ಲಿ ಬಾಲ ಹುಳುಗಳು ಏಕೆ ಸುರಿಯಬಾರದು ? ಹರಿಗೆ ಹತ್ತು ಪ್ರಳಯಗಳು ಮತ್ತು ಬ್ರಹ್ಮನಿಗೆ ಅನಂತ ಪ್ರಳಯಗಳು ಆಗಿವೆ. ಆದರೆ ಪರಮಾತ್ಮನಿಗೆ ಪ್ರಳಯಗಳಿದ್ದುದನ್ನು ನಿಮಗೆ ಗೊತ್ತಿದ್ದರೆ ಹೇಳಿರಿ. ಹಿಂದೆ ಅನೇಕ ಪ್ರಳಯಗಳು ಆಗಿಹೋಗಿವೆ. ಅವುಗಳಿಗಿಂತಲೂ ನಮ್ಮ ಪರಮಾತ್ಮನು ಹಿಂದಿನವನು. ಅಂದರೆ ಅವನು ಪ್ರಳಯರಹಿತನೆಂಬ ಭಾವವು ಇದರಲ್ಲಿದೆ.

(೩೩) ಶ್ರುತಿಗಗಮ್ಯ ದ್ವಾದಶಾದಿತ್ಯನಪ್ರತಿಮ ಮಹಿಮಂಗೆ ಪ್ರತಿಯುಂಟೇ ? ' ಸೋಮಃ ಪವತೆ ' ಎಂಬ ಶ್ರುತಿಯನರಿದು, ಶಿವನೇಕೋ ದೇವ ರುದ್ರನದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ಕೂಡಲಸಂಗಮದೇವನೇ ದೇವನಲ್ಲದೆ ಇಲ್ಲೆಂದು ಎತ್ತಿದೆ ಬಿರಿದ ಜಗವೆಲ್ಲರಿಯಲು.

ಅಗಮ್ಯ = ತಿಳಿಯಲಾರದ; ಆದಿತ್ಯ = ಸೂರ್ಯ; ಅಪ್ರತಿಮ = ಜೋಡಿಲ್ಲದ; ಪ್ರತಿ = ಸರಿ.

ಭಾವಃ— ' ಪರಮಾತ್ಮನು ವೇದಗಳಿಗೆ ತಿಳಿಯಲಾರದವನು, ಅವನು ಹನ್ನೆರಡು ಸೂರ್ಯರಷ್ಟು ಪ್ರಕಾಶಮಯನು, ಅವನ ಮಹಿಮೆಗೆ ಜೋಡಿಲ್ಲ ' ಹೀಗೆ ವೇದ ವಾಕ್ಯಗಳು ಹೇಳುತ್ತಿವೆ. ' ಸೋಮಃ, ಪವತೆ ' ಎಂಬ ಶ್ರುತಿವಾಕ್ಯವು ಇದೇ ಭಾವವನ್ನು ಹೇಳುತ್ತಿದೆ. ಆದ್ದರಿಂದ ' ಶಿವನೊಬ್ಬನೇ ದೇವನು, ರುದ್ರನಿಗೆ ಜೋಡು ಇಲ್ಲ ' ಎಂದು ನೀವೆಲ್ಲರೂ ನಂಬಬೇಕು. ಪರಮಾತ್ಮನೊಬ್ಬನೇ ದೇವರು, ಬೇರೆ

ಯಾರೂ ಇಲ್ಲ ಎಂಬ ಅವನ ಬಿರುದನ್ನು ನಾನು ಜಗತ್ತಿನಲ್ಲಿ ಎಲ್ಲರೂ ಅರಿಯುವ ಹಾಗೆ ಗಟ್ಟಿಯಾಗಿ ಹೇಳುತ್ತೇನೆಂದು ಬಸವೇಶ್ವರನು ಆಹ್ವಾನಿಸುತ್ತಾನೆ.

ಕಿರುಕುಳ ದೈವಗಳಲ್ಲಾವುದೂ ಪರಮಾತ್ಮನಲ್ಲ.

(೩೪) ಕರ್ತನ ಪೂಜಿಸಿ, ಕುಚಿತ ದೈವಕ್ಕೆರಗುವವರು ಕತ್ತೆ ಕುದುರೆಗೆ ಹುಟ್ಟಿದ ಹೇಸರಿನಂತೆ. ಅವರ ಭಕ್ತರೆಂತೆಂಬೆ ? ಅವರ ಭೃತ್ಯರೆಂತೆಂಬೆ? ಅವರ ಶರಣರೆಂತೆಂಬೆ ? ಎರಡುಳ್ಳ ಪ್ರಪಂಚಿಗಳ ಮೆಚ್ಚ ಕೂಡಲಸಂಗಮದೇವ.

ಕುಚಿತ = ಕುತ್ಸಿತ, ಕ್ಷುಲ್ಲಕ.

ಭಾವಃ— ಪರಮಾತ್ಮನನ್ನು ಪೂಜಿಸಿದ ಬಳಿಕ ಕ್ಷುಲ್ಲಕ ದೇವತೆಗಳಿಗೆ ನಮಸ್ಕರಿಸುತ್ತಾರೆ. ಇವರು ಕತ್ತೆ ಮತ್ತು ಕುದುರೆಯಿಂದ ಹುಟ್ಟಿದ ಹೇಸರಗತ್ತೆಗಳಂತೆ. ಇವರು ಭಕ್ತರೆಂದು ಹೇಗೆನ್ನಲಿ ? ಅವರು ಪರಮಾತ್ಮನ ಸೇವಕರೆಂದು ಹೇಗೆನ್ನಲಿ ? ಅವರು ಶರಣರೆಂದು ಹೇಗೆನ್ನಲಿ? ಎರಡು ವಿಧವಾಗಿ ನಡೆಯುವ ಇಂಥ ಸಂಸಾರಿಗಳನ್ನು ಪರಮಾತ್ಮನು ಎಂದೂ ಮೆಚ್ಚಲಾರನು.

(೩೫) ಯುಗಜುಗ ಪ್ರಳಯವಾಹಂದು ಕಾಣೆನಂದೂ ಕಾಣೆ. ಧಿಗಿಲು ಭುಗಿಲೆಂದುರಿವಂದು ಕಾಣೆನಂದೂ ಕಾಣೆ. ನಮ್ಮ ಕೂಡಲಸಂಗಮದೇವನಲ್ಲದೆ ತಲೆದೋರುವ ದೈವಂಗಳನಂದೂ ಕಾಣೆನಂದೂ ಕಾಣೆ.

ಭಾವಃ— ಅನೇಕ ಯುಗಗಳು ಆಗಿ ಹೋದರೂ ಕೂಡ ಕ್ಷುಲ್ಲಕ ದೇವತೆಗಳಿರುವುದನ್ನು ನಾನು ಯಾವಾಗಲೂ ಕಂಡಿಲ್ಲ. ಈಗಲೂ ಕಾಣಲಾರೆನು. ಪ್ರಳಯ ಕಾಲದಲ್ಲಿ ಜಗತ್ತೆಲ್ಲ ಧಿಗಿಲು ಭುಗಿಲೆಂದು ಉರಿಯುವಾಗಲೂ ಅವುಗಳನ್ನು ನಾನು ಕಂಡಿಲ್ಲ. ಈಗಲೂ ಕಾಣಲಾರೆನು. ನಮ್ಮ ಪರಮಾತ್ಮನನ್ನು ಬಿಟ್ಟು ತಲೆದೋರುವ ಇಂಥ ದೇವತೆಗಳನ್ನು ನಾನು ಎಂದೂ ಕಂಡಿಲ್ಲೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ.

(೩೬) ಹರನ ಕೊರಳಲ್ಲಿಹ ಕರೋಟಿಮಾಲೆಯ ಶಿರದ ಲಿಖಿತವ ಕಂಡು ಮರುಳು ತಾಂಡಗಳೋದಿ ನೋಡಲು, ಇವನಜ ಇವ ಹರಿ ಇವ

ಸುರಪತಿ ಇವ ಧರಣೇಂದ್ರನಿವನಂತಕನೆಂದು ಹರುಷದಿಂದ ಸರಸವಾಡಿತ್ತ ಕಂಡು ಹರ ಮುಕುಳಿತನಾಗಿ ನಕ್ಕ ನಮ್ಮ ಕೂಡಲಸಂಗಮದೇವ.

ಕರೋಟಿ = ತಲೆಬುರುಡೆ; ಮರುಳು = ಭೂತ; ತಾಂಡ = ಸಮೂಹ; ಅಜ = ಬ್ರಹ್ಮ; ಸುರಪತಿ = ಇಂದ್ರ; ಧರಣೇಂದ್ರ = ಜೀನದೇವತೆ; ಅಂತಕ = ಯಮ; ಸರಸ = ಚೇಷ್ಟೆ; ಮುಕುಳಿತನಾಗಿ = ಮುಗುಳ್ನಗೆಯಿಂದ.

ಭಾವಃ — ಹರನ ಕೊರಳಲ್ಲಿ ತಲೆಬುರುಡಿಗಳ ಸರವಿದ್ದು ಅವುಗಳ ಹಣೆಯ ಮೇಲಿರುವ ಬರಹವನ್ನು ಅವನ ಹತ್ತರಿದ್ದ ಭೂತಗಣಗಳು ಕಂಡು, ಈ ಬುರುಡಿಯು ಬ್ರಹ್ಮನದು, ಇದು ವಿಷ್ಣುವಿನದು, ಇದು ಇಂದ್ರನದು, ಇದು ಧರಣೇಂದ್ರನದು, ಇದು ಯಮನದು, ಎಂದು ಅಲ್ಹಾದಬಟ್ಟು ಚೇಷ್ಟೆಯಿಂದ ಓದುತ್ತಿರುವದನ್ನು ಹರನು ಕಂಡು ಮುಗುಳ್ನಗೆ ನಕ್ಕನು. ಅಂದರೆ ಪರಮಾತ್ಮನು ಅನಾದಿಯಾಗಿದ್ದಾನೆಂಬ ಭಾವವು ಇದರಲ್ಲಿದೆ.

(೩೭) ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ. ಜಿನ್ನನ ಪೂಜಿಸಿ ಬತ್ತಲೆ ಇಪ್ಪುದ ಕಂಡೆ. ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದ ಕಂಡೆ. ನಮ್ಮ ಕೂಡಲಸಂಗನ ಶರಣರ ಪೂಜಿಸಿ ದೇವ ಭಕ್ತನೆನಿಸಿಕೊಂಬುದ ಕಂಡೆ.

ಮುಡುಹ = ಭುಜ.

ಭಾವಃ — ಜನರು ವಿಷ್ಣುವನ್ನು ಪೂಜಿಸಿ ತಮ್ಮ ಭುಜವನ್ನು ಸುಡಿಸಿಕೊಳ್ಳುವದನ್ನು ನೋಡುತ್ತೇನೆ. ಜಿನ ದೇವತೆಯನ್ನು ಪೂಜಿಸಿ ಬತ್ತಲೆ ಇರುವದನ್ನು ನೋಡುತ್ತೇನೆ. ಮೈಲಾರನನ್ನು ಪೂಜಿಸಿ ನಾಯಿಯಂತೆ ಬೊಗುಳುವದನ್ನು ನೋಡಿದ್ದೇನೆ. ಆದರೆ ನಮ್ಮ ಪರಮಾತ್ಮನನ್ನು ಪೂಜಿಸಿ, ಶರಣರೆಂದು ಹೇಳಿಸಿಕೊಂಬುದನ್ನು ನಾನು ನೋಡಿದ್ದೇನೆ.

(೩೮) ಅಮೃತಮತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ. ಸತ್ಯಋಷಿ ಜ್ಯೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ. ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು. ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ. ಇವರೆಲ್ಲರೂ ಯೋನಿಜರೆಂಬುದ ತ್ರಿಜಗ ಬಲ್ಲುದು. ಉತ್ಪತ್ತಿ ಸ್ಥಿತಿಪ್ರಳಯಕ್ಕೆ ಹೊರಗಾದ ಕೂಡಲಸಂಗಮ ದೇವಂಗೆ ಮಾತಾ ಪಿತರುಗಳುಳ್ಳರೆ ಹೇಳಿರೋ.

ಅರುಹ = ಜಿನ; ಯೋನಿಜ = ಸ್ತ್ರೀಯರಿಂದ ಹುಟ್ಟಿದವ.

ಭಾವಃ— ಅಮೃತಮತಿ ಸೋಮಶಂಭುವಿಗೆ ಹುಟ್ಟಿದಾತನು ಇಂದ್ರನು. ಸತ್ಯಋಷಿ ಜ್ಯೇಷ್ಠಾದೇವಿಗೆ ಹುಟ್ಟಿದಾತನು ಬ್ರಹ್ಮನು. ವಸುದೇವ ದೇವಕಿಗೆ ಹುಟ್ಟಿದಾತನು ವಿಷ್ಣುವು. ನಾಭಿರಾಜ ಮರುತಾದೇವಿಗೆ ಹುಟ್ಟಿದಾತನು ಜಿನನು. ಇವರೆಲ್ಲರೂ ಸ್ತ್ರೀಯರಿಂದ ಹುಟ್ಟಿದರೆಂಬುದನ್ನು ಮೂರು ಲೋಕವೆಲ್ಲವೂ ಬಲ್ಲದು. ಆದರೆ ನಮ್ಮ ಪರಮಾತ್ಮನಿಗೆ ಹೀಗೆ ಉತ್ಪತ್ತಿ, ಸ್ಥಿತಿ, ಲಯವೆಂಬುವು ಇಲ್ಲ. ಅವುಗಳಿಗೆ ಅವನು ಹೊರತಾಗಿದ್ದಾನೆ. ಅವನಿಗೆ ತಾಯಿತಂದೆಗಳಿದ್ದರೆ ಹೇಳಿರಿ, ಎಂದು ಬಸವೇಶ್ವರನು ಇಲ್ಲಿ ಆಹ್ವಾನ ಮಾಡುತ್ತಾನೆ.

(೩೯) ಆವಾಗಳೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು. ಹೋಗೆಂದರೆ ಹೋಗವು. ನಾಯಿಂದ ಕರಕಷ್ಟ, ಕೆಲವು ದೈವಂಗಳು. ಲೋಗರ ಬೇಡಿಕೊಂಡುಂಬ ದೈವಂಗಳು ತಾವೇನ ಕೊಡುವವೋ ಕೂಡಲಸಂಗಮದೇವಾ ?

ಲೋಗರ = ಜನರ; ಕರಕಷ್ಟ = ಅತ್ಯಂತ ಕನಿಷ್ಟ.

ಭಾವಃ— ಕೆಲವು ದೈವಗಳು ಯಾವಾಗಲೂ ಜನರ ಮನೆಯ ಬಾಗಿಲಲ್ಲಿದ್ದುಕೊಂಡು ಕಾವಲು ಮಾಡುತ್ತವೆ. ಅವು ಹೊರಟು ಹೋಗಲಿಕ್ಕೆ ಹೇಳಿದರೂ ಹೋಗುವದಿಲ್ಲ. ಅವು ನಾಯಿಗಿಂತಲೂ ಕನಿಷ್ಟವಾದವುಗಳು. ಜನರಿಂದ ಬೇಡಿಕೊಂಡು ತಮ್ಮ ಹೊಟ್ಟೆ ಹೊರೆಯುವ ಇಂಥ ದೈವಗಳು ನಿಮಗೇನು ಕೊಡಲು ಸಮರ್ಥವಾಗುವವು ?

(೪೦) ಹಾಳು ಮೊರಡಿಗಳಲ್ಲಿ, ಊರದಾರಿಯಲ್ಲಿ, ಕೆರೆ ಭಾವಿ ಹೂಗಿಡು ಮರಂಗಳಲ್ಲಿ, ಗ್ರಾಮಮಧ್ಯದಲ್ಲಿ, ಚೌಪಥ ಪಟ್ಟಣಪ್ರವೇಶದಲ್ಲಿ, ಹಿರಿಯಾಲದ ಮರದಲ್ಲಿ, ಮನೆಮಾಡಿ ಕರೆವೆಮ್ಮೆಯ, ಹಸುಗೂಸು, ಬಸಿರೆ, ಬಾಣತಿ, ಕುಮಾರಿ, ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ ಮಾರಯ್ಯ, ಬೀರಯ್ಯ, ಕೇಚರ, ಗಾವಿಲಿ, ಅಂತರ, ಬೆಂತರ, ಕಾಳಯ್ಯ, ಮಾಳಯ್ಯ, ಕೇತಯ್ಯ, ಧೂಳಯ್ಯಗಳೆಂಬ ನೂರು ಮಡಿಕೆಗೆ ನಮ್ಮ ಕೂಡಲ ಸಂಗಮದೇವರಿಗೆ ಶರಣೆಂಬುದೊಂದು ಡೊಣ್ಣೆ ಸಾಲದೇ ?

ಚೌಪಥ ಪಟ್ಟಣ ಪ್ರವೇಶ = ನಾಲ್ಕು ದಾರಿಗಳು ಕೂಡುವ ಪಟ್ಟಣದ ಪ್ರವೇಶದ್ವಾರ; ಕೊಡಗೂಸು = ಕನ್ನಿಕೆ; ತಿರಿದುಂಬ = ಭಿಕ್ಷೆ ಬೇಡಿ ತಿನ್ನುವ.

ಭಾವಃ— ಹಾಳು ಮೊರಡಿಗಳಲ್ಲಿ, ಊರಿಗೆ ಹೋಗುವ ದಾರಿಯಲ್ಲಿ, ಹಾಗೆಯೇ ಕೆರೆ, ಭಾವಿ, ಹೂವಿನಗಿಡ, ಮರಗಳು, ಊರ ಮಧ್ಯ, ನಾಲ್ಕು ಹಾದಿಗಳು ಕೂಡುವ ಪಟ್ಟಣದ ಪ್ರವೇಶದ್ವಾರ, ಹಿರಿಯಾಲದಮರ, ಇಂಥ ಸ್ಥಳಗಳಲ್ಲಿ ಮನೆಮಾಡಿಕೊಂಡು, ಹಾಲು ಕೊಡುವ ಎಮ್ಮೆ, ಹುಟ್ಟಿದ ಎಳೆಗೂಸು, ಬಸಿರೆ, ಬಾಣಂತಿ, ಕುಮಾರಿ, ಕನ್ನಿಕೆ ಇಂಥವರನ್ನು ಹಿಡಿದು, ಹೊಟ್ಟೆ ಹೊರೆದುಕೊಳ್ಳುವಂಥ, ಭಿಕ್ಷೆಯಿಂದ ಜೀವಿಸುವಂಥ, ಮಾರಯ್ಯ, ಬೀರಯ್ಯ, ಖೇಚರ, ಗಾವಿಲ, ಅಂತರ, ಬೆಂತರ, ಕಾಳಯ್ಯ, ಮಾಳಯ್ಯ, ಕೇತಯ್ಯ, ಧೂಳಯ್ಯ, ಎಂಬ ಹೆಸರುಳ್ಳ ನೂರು ಮಡಿಕೆಗಳನ್ನು ಒಡೆದು ಹಾಕಲಿಕ್ಕೆ, 'ಎಲೋ ಪರಮಾತ್ಮನೇ, ನಿನಗೆ ಶರಣು' ಎಂಬದೊಂದು ಡೊಣ್ಣೆ ಸಾಲುವದಿಲ್ಲವೇ?

(೪೧) ಗಾಡಿಗ ಡಿಂಬು ಗಂಗೆ, ಚಿಕ್ಕುಮುಟ್ಟಿಗೆ ಹಸುರಂಬಲಿಮುಟ್ಟಿಗೆ ಹುರಿಬುತ್ತಿಯ ಬೇಡಿ, ಮನುಷ್ಯರ ಪಿಡಿದು ಪೀಡಿಸಿ, ತಮ್ಮ ಬಸುರ್ಗೆ ಕೂಳ ಕಾಣದೆ, ಈಡಾಡಿದ ಕೂಳಂಬಲಿಯನಾಯ್ದು, ಕುರುಕುವ ಹೇಸಿ ದೈವಂಗಳ ಬೇಡಿ ಬೇಡಿ, ನಿರರ್ಥ ಕೆಡಬೇಡೆಲವೋ. ಕೂಡಲಸಂಗಮದೇವರ ನೆರೆನಂಬುದೆಲವೋ.

ಗಾಡಿಗ = ಜಗುಲಿಯಮೇಲಿದ್ದು ಪೂಜೆ ಮಾಡಿಸಿಕೊಂಬ ಒಂದು ಭೂತ; ಡಿಂಬು = ಗೊದಲೆಯಲ್ಲಿಯ ಭೂತ; ಗಂಗೆ = ನೀರಲ್ಲಿದ್ದ ಭೂತ; ಚಿಕ್ಕು = ಚಕ್ಕಲಿ; ಮುಟ್ಟಿಗೆ = ಜೋಳದ ಬೇಯಿಸಿದ ಮುದ್ದಿ; ಬಸುರ್ಗೆ = ಹೊಟ್ಟೆಗೆ; ಈಡಾಡಿದ = ಚಲ್ಲಿಕೊಟ್ಟ; ಕೂಳಂಬಲಿಯನ್ನು = ನುಚ್ಚು ಅಂಬಲಿಯನ್ನು; ಆಯ್ದು = ಆರಿಸಿ; ಕುರುಕು = ಗೋಪ್ಯವಾಗಿ ತಿನ್ನು.

ಭಾವಃ— ಜಗುಲಿ ಅಥವಾ ಗೊದಲೆ ಅಥವಾ ನೀರಲ್ಲಿದ್ದುಕೊಂಡು ಚಕ್ಕಲಿಯ ಮುಟ್ಟಿಗೆ, ಹಸುರಾದ ಅಂಬಲಿಯ ಮುಟ್ಟಿಗೆ, ಹುರಿ ಬುತ್ತಿ ಇವುಗಳನ್ನು ಬೇಡಿ ತಿನ್ನುತ್ತ, ಮನುಷ್ಯರನ್ನು ಹಿಡಿದು ಪೀಡಿಸುತ್ತ, ತಮ್ಮ ಹೊಟ್ಟೆಗೆ ಕೂಳನ್ನು ಕಾಣದೆ, ಅಲ್ಲಲ್ಲಿ ಒಗೆದಿದ್ದ ಎಂಜಲಾದ ಅಂಬಲಿಯನ್ನು ಆರಿಸಿಕೊಂಡು, ಅದನ್ನು ಮುಚ್ಚಿ ತಿನ್ನುವ ಹೇಸಿ ದೈವಗಳಿಗೆ ಹರಿಕೆ ಹೊತ್ತು ಅವುಗಳಿಗೆ ಬೇಡಿಕೊಂಡು ವ್ಯರ್ಥವಾಗಿ

ಕೆಡಬೇಡಿರಿ. ಆದರೆ ನೀನು ಒಬ್ಬನೇ ಆದ ಪರಮಾತ್ಮನಲ್ಲಿ ವಿಶ್ವಾಸವಿಟ್ಟು ನಡೆಯಬೇಕು ಎಂದು ಬಸವೇಶ್ವರನು ಇಲ್ಲಿ ಬೋಧಿಸುತ್ತಾನೆ.

(೪೨) ಬನ್ನಿರೇ ಅಕ್ಕಗಳು. ಹೋಗಿರೇ ಹಿರಿಯಾಲದ ಮರಕ್ಕೆ. ಕಚ್ಚುವವೇ ನಿಮ್ಮ ಚಿಪ್ಪಿನ ಹಲ್ಲುಗಳು? ಬೆಚ್ಚಿಸುವವೇ ನಿಮ್ಮ ಬಜ್ಜಣೆಯ ರೂಹುಗಳು? ನಮ್ಮ ಕೂಡಲ ಸಂಗಮದೇವನಲ್ಲದೆ ಪರ ದೈವಂಗಳು ಮನಕ್ಕೆ ಬಂದವೇ ಬಿಕ್ಕನೆ ಬಿರಿವ ದೈವಂಗಳು?

ಚಿಪ್ಪು = ತಲೆಡವಿಗೆ; ಬೆಚ್ಚಿಸು = ಅಂಜಿಸು; ಬಜ್ಜಣೆ = ಭೂತಗಳು; ರೂಹು = ರೂಪು.

ಭಾವಃ— ಅಕ್ಕಗಳೇ ಬನ್ನಿರಿ. ಹಿರಿಯಾಲದ ಮರವು ಅಲ್ಲಿದೆ. ಅದರ ಸುತ್ತಲೂ ಪ್ರದಕ್ಷಿಣೆ ಹಾಕಿರಿ. ಅಲ್ಲಿ ತಲೆಡವಿಗೆಗಳಲ್ಲಿ ಹಲ್ಲುಗಳೂ ಇವೆ. ಅಲ್ಲದೆ ಅನೇಕರು ಭೂತಗಳಿಗೆ ಬೇಡಿಕೊಂಡು ಅವರು ಇಟ್ಟ ಗೊಂಬೆಗಳೂ ಅಲ್ಲಿವೆ. ಅವುಗಳಿಗಂಜಿ ಅವುಗಳನ್ನು ಸಮಾಧಾನಗೊಳಿಸಲು ನೀವು ಹೀಗೆ ಪ್ರದಕ್ಷಿಣೆ ಹಾಕುವಿರೋ ಹೇಗೆ ಎಂದು ಚೇಷ್ಟೆಯಿಂದ ಬಸವೇಶ್ವರನು ಇಲ್ಲಿ ನುಡಿದಿದ್ದಾನೆ. ಆದರೆ ಪರಮಾತ್ಮನೊಬ್ಬನೇ ದೈವವು. ಇವನಿಗಿಂತಲೂ ಇತರ ದೇವತೆಗಳು ಹೀಗೆ ನಿಮ್ಮ ಮನಸ್ಸಿಗೆ ಬಂದವೇ? ಈ ದೈವಗಳು ಬಿಕ್ಕನೇ ಬಿರಿದು ಹೋಗುವಂಥವು. ಆದರೆ ಪರಮಾತ್ಮನು ಹೀಗೆ ಬಿರಿದು ಹೋಗುವಂಥವನಲ್ಲ, ಅವನು ಶಾಶ್ವತನೆಂಬುದನ್ನು ನೀವು ಲಕ್ಷಿಸಬೇಕೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ.

(೪೩) ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ ಮುರುಟುವ ದೈವವನೆಂತು ಸರಿ ಎಂಬೆನಯ್ಯಾ? ಅವಸರ ಬಂದರೆ ಮಾರುವ ದೈವವನೆಂತು ಸರಿ ಎಂಬೆನಯ್ಯಾ? ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿ ಎಂಬೆನಯ್ಯಾ? ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೇ ದೈವ.

ಮುರುಟು = ಮುದುಡು;

ಭಾವಃ— ಬಸವೇಶ್ವರನು ಜನರು ಮಾಡುವ ಪ್ರತಿಮೆಗಳನ್ನು ಕುರಿತು ಚೇಷ್ಟೆಯಿಂದ ಇಲ್ಲಿ ನುಡಿಯುತ್ತಾನೆ. ಅರಗು ತುಂಬಿ ಅವುಗಳನ್ನು ಜನರು ಮಾಡುವದುಂಟು. ಆದರೆ ಬೆಂಕಿಯು ಅವುಗಳ ಸಮೀಪಕ್ಕೆ ಬಂದ ಕೂಡಲೆ ಅವು ಕರಗಿ ಹೋಗುತ್ತವೆ ಮತ್ತು ಅವು ಮುದುಡಿ ಡೊಂಕಾ

ಗುತ್ತವೆ. ಅವುಗಳಲ್ಲಿ ಕೆಲವುಗಳನ್ನು ಬೆಲೆಯುಳ್ಳ ಧಾತುವಿನಿಂದ ಮಾಡುತ್ತಾರೆ. ಆದರೆ ಪ್ರಸಂಗ ಬಂದರೆ ಅವುಗಳನ್ನು ಅವರು ಹೊಟ್ಟೆಗಾಗಿ ಮಾರಿಬಿಡುತ್ತಾರೆ ಅಥವಾ ಕಳ್ಳರ ಅಂಜಿಕೆ ಇದ್ದರೆ ಅವುಗಳನ್ನು ಭೂಮಿಯಲ್ಲಿ ಹುಗಿದುಬಿಡುತ್ತಾರೆ. ಆದರೆ ನಮ್ಮ ಪರಮಾತ್ಮನು ಇಂಥವನಲ್ಲ. ಅವನು ಸಹಜಭಾವವುಳ್ಳವನು. ನಿಜದಲ್ಲಿಯೇ ಬೆರೆತುಕೊಂಡಂಥವನು. ಅವನು ಒಬ್ಬನೇ ಇದ್ದಾನೆ.

(೪೪) ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲುನಾರಿ ದೈವ ಕಾಣಿರೋ. ಕೊಳಗ ದೈವ, ಗಿಣಿಲು ದೈವ ಕಾಣಿರೋ. ದೈವದೈವವೆಂದು ಕಾಲಿಡಲಿಂಬಿಲ್ಲ. ದೇವನೊಬ್ಬನೇ ಕೂಡಲಸಂಗಮದೇವ.

ಹಣಿಗೆ = ನೇಯುವ ಕಾಲದಲ್ಲಿ ಮಗ್ಗಕ್ಕೆ ಉಪಯೋಗಿಸುವ ಒಂದು ಸಾಧನ; ಬಿಲ್ಲುನಾರಿ = ಹೆದೆ; ಗಿಣಿಲು = ಗಿಂಡಿ.

ಭಾವ:— ಮಣ್ಣಿನ ಮಡಿಕೆ, ಮೊರ, ಬೀದಿಯಕಲ್ಲು, ಹಣಿಗೆ, ಹೆದೆ, ಕೊಳಗ, ಗಿಂಡಿ ಇವೇ ಮೊದಲಾದವುಗಳು ದೇವರೆಂದು ಭಾವಿಸಿ, ಜನರು ಅವುಗಳನ್ನು ಪೂಜೆ ಮಾಡುತ್ತಾರೆ. ಇವು ಅಸಂಖ್ಯವಾಗಿರುವದರಿಂದ ಕಾಲಿಡಲು ಸಹ ಸ್ಥಳ ದೊರೆಯದಂತಾಗಿದೆ. ಆದರೆ ಪರಮಾತ್ಮನೊಬ್ಬನೇ ಇದ್ದಾನೆಂದು ನೀವು ತಿಳಿಯಬೇಕು.

(೪೫) ಮಾರಿ ಮಸಣಿ ಎಂಬಿವು ಬೇರಿಲ್ಲ ಕಾಣಿರೋ. ಮಾರಿ ಎಂಬುದೇನು? ಕಂಗಳು ತಪ್ಪಿ ನೋಡಿದರೆ ಮಾರಿ. ನಾಲಿಗೆ ತಪ್ಪಿ ನುಡಿದರೆ ಮಾರಿ. ನಮ್ಮ ಕೂಡಲಸಂಗಯ್ಯನ ನೆನಹ ಮರೆದರೆ ಮಾರಿ.

ನೆನಹ = ಧ್ಯಾನ.

ಭಾ:— ಜನರು ಮಾರಿ, ಭೂತ ಎಂದು ಅವುಗಳಿಗೆ ಅಂಜುತ್ತಾರೆ. ಆದರೆ ಈ ದೇವತೆಗಳು ನಿಜವಲ್ಲ. ಕಣ್ಣುಗಳು ತಪ್ಪಿ ನೋಡಿದರೆ ಅಥವಾ ನಾಲಿಗೆ ತಪ್ಪಿ ನುಡಿದರೆ ಅದೇ ಮಾರಿ. ನಮ್ಮ ಪರಮಾತ್ಮನ ಧ್ಯಾನವನ್ನು ಮರೆದರೆ ಅದೇ ಮಾರಿಯು.

(೪೬) ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು! ಸಾಲಬಟ್ಟರೆ ಮಾರಿಕೊಂಬರಯ್ಯ. ಸಾಲಬಟ್ಟರೆ ಅವರನೊತ್ತೆಯಿಟ್ಟುಕೊಂಡುಂಬರಯ್ಯ. ಮಾರ ಹೋಗ, ಒತ್ತೆ ಹೋಗ ಕೂಡಲಸಂಗಮದೇವ.

ನೋಂತು = ಬೇಡಿಕೊಂಡು.

ಭಾವ: — ಮಾರಿಕಾದೇವಿಗೆ ಬೇಡಿಕೊಂಡು ಆಕೆಯ ಮೂರ್ತಿಯನ್ನು ಮಾಡಿ ಕೊರಳಲ್ಲಿ ಕಟ್ಟಿಕೊಳ್ಳುತ್ತಾರೆ. ಆದರೆ ಸಾಲವಾಗಲು ಆ ಮೂರ್ತಿಯನ್ನು ಮಾರಿಕೊಂಡು ತಿನ್ನುತ್ತಾರೆ. ಇಲ್ಲವೆ ಒತ್ತೆ ಇಟ್ಟುಬಿಡುತ್ತಾರೆ. ಆದರೆ ಪರಮಾತ್ಮನನ್ನು ಹೀಗೆ ಮಾರಲಿಕ್ಕೆ ಬರಲಾರದು ಅಥವಾ ಒತ್ತೆ ಇಡಲಿಕ್ಕೆ ಬರಲಾರದು.

(೪೭) ಉಣಲುಡಲು ಮಾರಿಯಲ್ಲದೆ, ಕೊಲಲು ಕಾಯಲು ಮಾರಿಯೇ? ತನ್ನ ಮಗನ ಜವನೊಯ್ದಲ್ಲಿ, ಅದೆತ್ತ ಹೋದಳು ಮಾರಿಕವ್ವೆ? ಈವರೆ ಕಾಯ್ವರೆ, ನಮ್ಮ ಕೂಡಲಸಂಗಯ್ಯನಲ್ಲದೆ ಮತ್ತೊಂದು ದೈವವಿಲ್ಲ.

ಜವ = ಯಮ; ಈವರೆ = ಕೊಡಲಿಕ್ಕೆ.

ಭಾವ: — ತಿನ್ನಲಿಕ್ಕೆ ಮತ್ತು ಉಡಲಿಕ್ಕೆ ಮಾತ್ರ ಮಾರಿಯು ಸಮರ್ಥಳು. ಆದರೆ ಕಾಯಲಿಕ್ಕೆ ಅಥವಾ ನಾಶ ಮಾಡಲಿಕ್ಕೆ ಅವಳು ಸಮರ್ಥಳಲ್ಲ. ಯಮನು ಆಕೆಯ ಮಗನನ್ನು ಒಯ್ಯುತ್ತಿರುವಾಗ ಆಕೆಯು ಎಲ್ಲಿಗೆ ಹೋದಳು? ಆದರೆ ಕೊಡಲಿಕ್ಕೆ ಮತ್ತು ಕಾಯಲಿಕ್ಕೆ ನಮ್ಮ ಪರಮಾತ್ಮನೊಬ್ಬನೇ ಸಮರ್ಥನಲ್ಲದೆ, ಬೇರೆ ಯಾವ ದೇವತೆಗಳೂ ಸಮರ್ಥರಲ್ಲ.

(೪೮) ವೇದ ಸ್ವಯಂಭುವೆಂಬ ವಾದಿ ನೀ ಕೇಳೆಲವೋ. ಏಕೋ ದೇವ, ರುದ್ರನದ್ವಿತೀಯನೆಂದು ನಂಬುವುದು ಕಾಣಿರಣ್ಣಾ. 'ಓಂ ದ್ಯಾವಾಭೂಮಿ ಜನಯನ್ ದೇವ ಏಕೋ ಏವ ರುದ್ರೋನದ್ವಿತೀಯ'ನೆಂದು ನಂಬುವುದು ಕಾಣಿರಣ್ಣಾ. 'ಚಕಿತಮಭಿಧತ್ತೇ' ಎಂದು ಶ್ರುತಿ ಸಾರುತಿದ್ದಾವೆ. ಜಗದ ಕರ್ತ ಕೂಡಲಸಂಗಮದೇವನೊಬ್ಬನೇ ಕಾಣಿರಣ್ಣಾ.

ಸ್ವಯಂಭು = ತಾನೇ ಉದಿಸಿದುದು.

ಭಾವ:— ವೇದಗಳು ತಾವೇ ಹುಟ್ಟಿವೆ ಎಂದು ವಾದಿಸುವಂಥ ಎಲೋ ನೀನು ಕೇಳು. ವೇದಗಳು ರುದ್ರನೊಬ್ಬನೇ ದೇವರು, ಅವನಿಗೆ ಯಾರೂ ಜೋಡು ಇಲ್ಲ ಎಂದು ಹೇಳುತ್ತಿವೆ. ಶ್ರುತಿಗಳು ಸಹ ಪರಮಾತ್ಮನ ಸ್ವರೂಪವನ್ನು ಏನೂ ತಿಳಿಯಲಾರದೆ ಆಶ್ಚರ್ಯಚಕಿತವಾಗಿ ನುಡಿಯುತ್ತಿವೆ ಎಂದು ಅವುಗಳಲ್ಲಿಯೇ ವಾಕ್ಯಗಳಿವೆ. ಆದ್ದರಿಂದ ಪರಮಾತ್ಮನೊಬ್ಬನೇ ದೇವನಿದ್ದಾನೆಂದು ನಂಬಬೇಕು.

(೪೯) ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಗೌತುಮ ಮುನಿಗೆ ಗೋವಧೆಯಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಕರ್ಣನ ಕವಚ ಹೋಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ದಕ್ಷಂಗೆ ಕುಂದಲೆಯಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಪರಶುರಾಮ ಸಮುದ್ರಕ್ಕೆ ಗುರಿಯಾದ. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ನಾಗಾರ್ಜುನನ ತಲೆ ಹೋಯಿತ್ತು. ದೇವ ಭಕ್ತರೆಂದು ನಂಬಿದ ಕಾರಣ ನಮ್ಮ ಕೂಡಲಸಂಗನ ಶರಣರು ಕೈಲಾಸ ವಾಸಿಗಳಾದರು.

ಭಾವಃ— ಬ್ರಾಹ್ಮಣನು ದೈವವೆಂದು ನಂಬಿದ ಕಾರಣ ಗೌತುಮ ಮುನಿ, ಬಲಿಚಕ್ರವರ್ತಿ, ಕರ್ಣ, ದಕ್ಷಬ್ರಹ್ಮ, ಪರಶುರಾಮ, ನಾಗಾರ್ಜುನ ಇವರೆಲ್ಲರೂ ಅನೇಕ ಕಷ್ಟಗಳಿಗೆ ಈಡಾಗಬೇಕಾಯಿತು. ಆದರೆ ನಿಜವಾದ ದೇವರನ್ನೂ ಭಕ್ತರನ್ನೂ ನಮ್ಮ ಶರಣರು ನಂಬಿದ ಕಾರಣ ಅವರು ಕೈಲಾಸದಲ್ಲಿರುವಂಥವರಾದರು.

(೫೦) ಭಕ್ತರ ಕಂಡರೆ ಬೋಳರಪ್ಪಿರಯ್ಯಾ. ಸವಣರ ಕಂಡರೆ ಬತ್ತಲೆಯಪ್ಪಿರಯ್ಯಾ. ಹಾರುವರ ಕಂಡರೆ ಹರಿನಾಮವೆಂಬಿರಯ್ಯಾ. ಅವರವರ ಕಂಡರೆ ಅವರವರಂತೆ. ಸೂಳೆಗೆ ಹುಟ್ಟಿದವರ ತೋರದಿರಯ್ಯಾ! ಕೂಡಲಸಂಗಮದೇವರ ಪೂಜಿಸಿ ಅನ್ಯ ದೈವಂಗಳಿಗೆರಗಿ ಭಕ್ತರೆನಿಸಿಕೊಂಬ ಅಜ್ಞಾನಿಗಳನೇನೆಂಬೆನಯ್ಯಾ ?

ಸವಣರು = ಜೈನ ಸನ್ಯಾಸಿಗಳು.

ಭಾವಃ— ನೀವು ಭಕ್ತರನ್ನು ಕಂಡರೆ, ಬೋಳದಲೆ ಮಾಡಿಕೊಳ್ಳುತ್ತೀರಿ. ಜೈನ ಸನ್ಯಾಸಿಗಳನ್ನು ಕಂಡರೆ ದಿಗಂಬರರಾಗುತ್ತೀರಿ. ಬ್ರಾಹ್ಮಣರನ್ನು ಕಂಡರೆ ವಿಷ್ಣುವಿನ ಹೆಸರನ್ನು ತೆಗೆದುಕೊಳ್ಳುತ್ತೀರಿ. ಯಾರಾರನ್ನು ಕಾಣುತ್ತೀರೋ ಹಾಗೆಯೇ ಆಗಿಬಿಡುತ್ತೀರಿ! ಇವರು ಸೂಳೆಗೆ ಹುಟಿದವರು. ಇವರನ್ನು ನನಗೆ ತೋರಿಸಬೇಡಿರಿ. ಪರಮಾತ್ಮನ ಭಕ್ತರಾಗಿ ಬೇರೆ ದೇವತೆಗಳನ್ನು ಪೂಜಿಸಿಯೂ ತಾವು ಭಕ್ತರೆಂದೆನ್ನಿಸಿಕೊಳ್ಳಬೇಕೆಂಬ ಇಂಥ ಅಜ್ಞಾನಿಗಳನ್ನು ನಾನೇನೆನ್ನಲಿ?

ಯಜ್ಞಗಳನ್ನು ಮಾಡದಿರು, ಬಲಿಕೊಡಬೇಡ.

(೫೧) ದಕ್ಷಯಾಗವ ಮಾಡಲೆಂದು ಅಜ ಮುಖ್ಯರಾದ ಸುರರೆಲ್ಲ ನೆರೆದು ಬಂದು ಉಂಬುವ ಬಾಯ ನೋಡಾ! ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ! ಉಣದೆ ಉಡದೆ ಹೊಗೆಯಲ್ಲಿ ಸತ್ತ ಅಣ್ಣಗಳ ಕೇಡ ನೋಡಾ ಕೂಡಲ ಸಂಗಮದೇವಾ !

ಅಜ = ಬ್ರಹ್ಮ; ಸುರ = ದೇವತೆ;

ಭಾವಃ— ದಕ್ಷಬ್ರಹ್ಮನು ಯಜ್ಞವನ್ನು ಮಾಡುತ್ತಿರಲು ಬ್ರಹ್ಮ ಮೊದಲಾದ ದೇವತೆಗಳೆಲ್ಲ ಅಲ್ಲಿಗೆ ಬಂದು ಉಣ್ಣುವಾಗ ಅವರಿಗೆ ಉಂಟಾದ ಕೇಡನ್ನು ನೋಡಿರಿ! ಅವರು ಪರಮಾತ್ಮನನ್ನು ಬಿಟ್ಟುಕೊಟ್ಟು ಯಜ್ಞಕ್ಕೆ ಬಂದ ಕಾರಣ ಅವರ ಬಾಯಿಯೆಲ್ಲ ಬೆಂದು ಹೋದದ್ದನ್ನು ನೋಡಿರಿ! ಅವರು ಅಲ್ಲಿ ಉಣ್ಣದೆ ಉಡದೆ ಹೊಗೆಯಲ್ಲಿ ಸತ್ತು ಹೋದರು. ಈ ಅಣ್ಣಗಳ ಕೇಡನ್ನು ನೋಡಿರೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ.

(೫೨) ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲ್ಲು ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ ಬೀದಿಯ ಧೂಳವ ಹೊಯ್ದು ಬೊಬ್ಬಿಟ್ಟೆಲ್ಲರ ಕರೆವರಯ್ಯಾ. ಕೂಡಲಸಂಗಮದೇವ ವಂದನೆಯ ಮರೆದು ನಿಂದಿಸುತಿರ್ದರಯ್ಯಾ !

ಹವಿ = ಯಜ್ಞದಲ್ಲಿ ಅಗ್ನಿಕುಂಡದಲ್ಲಿ ಹಾಕುವ ಪದಾರ್ಥಗಳು.

ಭಾವಃ— ಅಗ್ನಿಯು ದೇವರೆಂದು ಒಳ್ಳೇ ಭಕ್ತಿಯಿಂದ ಆಹುತಿಯನ್ನು ಕೊಡುವ ಬ್ರಾಹ್ಮಣರ ಮನೆಗೆ ಬೆಂಕಿ ಹತ್ತಿ ಅದನ್ನು ಸುಡುತ್ತಿರುವಾಗ, ಅವರು ಬಚ್ಚಲ ನೀರು ಬೀದಿಯ ಧೂಳನ್ನು ಬೆಂಕಿಯ ಮೇಲೆ ಒಗೆಯುತ್ತ ಬಾಯಿ ಹೊಯ್ದುಕೊಳ್ಳುತ್ತ ಎಲ್ಲರನ್ನು ಕರೆಯುತ್ತಾರೆ. ಎಲೋ ಪರಮಾತ್ಮನೇ, ಅವರು ಆ ಅಗ್ನಿಗೆ ನಮಸ್ಕಾರ ಮಾಡುವದನ್ನು ಬಿಟ್ಟುಕೊಟ್ಟು ಅದನ್ನು ನಿಂದಿಸುತ್ತಾರೆ.

(೫೩) ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ ಮಟ್ಟಿಯನಿಟ್ಟ ದ್ವಿಜರ ಮಾತದೇಕೆ? ಹಗಲುಗಾಣದ ಗೂಗೆ ಇರುಳಾಯಿತೆಂದರೆ, ಜಗಕ್ಕೆ ಇರುಳಪ್ಪುದೇ ಮರುಳೇ? ಹೋಮದ ನೆವದಿಂದ ಹೋತನ ಕೊಂದು ತಿಂಬ ಅನಾಮಿಕರೊಡನಾಡಿ ಗೆಲುವುದೇನು ಕೂಡಲ ಸಂಗಮದೇವ?

ಇಟ್ಟಿಯ ಹಣ್ಣು = ಹೆಮ್ಮುಷ್ಟಿಯ ಫಲ; ಅನಾಮಿಕ = ಹೆಸರಿಲ್ಲದವ, ಕೀಳಮನುಷ್ಯ.

ಭಾವಃ—ಹೆಮ್ಮುಷ್ಟಿಯ ಹಣ್ಣನ್ನು ನರಿಯು ತಿಂದು ಅದಕ್ಕೆ ತಲೆ ತಿರುಗಹತ್ತಲು, ಅದು ಜಗತ್ತೇ ತಿರುಗುತ್ತದೆಂದು ಭಾವಿಸಿ ವರ್ತಿಸುವ ಹಾಗೆ ಅಕ್ಷತೆಯನಿಟ್ಟುಕೊಳ್ಳುವ ಈ ಬ್ರಾಹ್ಮಣರು ವರ್ತಿಸುತ್ತಾರೆ. ಅವರ ಮಾತಿಗೆ ನೀವೇಕೆ ಲಕ್ಷಕೊಡಬೇಕು? ಹಗಲಲ್ಲಿ ಪ್ರಕಾಶವನ್ನು ನೋಡಲಿಕ್ಕಾಗದೆ ಕಣ್ಣು ಮುಚ್ಚಿಕೊಂಡು ಕುಳಿತಿರುವ ಗೂಗೆಯು ಅದು ರಾತ್ರಿ ಎಂದು ಹೇಳಿದರೆ, ಉಳಿದ ಜಗತ್ತಿಗೆಲ್ಲ ಎಂದಾದರೂ ರಾತ್ರಿಯಾದೀತೇ? ಹೋಮದ ನೆವ ಮಾಡಿಕೊಂಡು ಹೋತನ್ನು ಕೊಂದು ತಿನ್ನುವ ಈ ಕೀಳ ಜನರೊಡನಿದ್ದು ಅವರನ್ನು ಗೆದ್ದು ನಾವು ದೊರಕಿಸುವದಾದರೂ ಏನು? ಅವರ ಸಂಗತಿ ವ್ಯರ್ಥವೆಂದು ಬಸವೇಶ್ವರನು ಅನ್ನುತ್ತಾನೆ.

(೫೪) ನಿಮ್ಮ ವಚನವೆಮ್ಮ ಪುಣ್ಯವೆಂಬುದು ಹುಸಿಯಾಯಿತ್ತು ನೋಡಾ. ಶಾಸ್ತ್ರದ ವಚನ ಹೋತಿಂಗೆ ಮಾರಿ. ಎಂತು ನಂಬುವೆನಯ್ಯ! ನಾನು ಕೊಲ್ಲೆನು, ನೇಣು ಕೊಂದಿತೆಂಬ ಸೂನೆಗಾರರನೇನೆಂಬೆನಯ್ಯ ಕೂಡಲಸಂಗಮದೇವಾ?

ನೇಣು = ಹಗ್ಗ; ಸೂನೆಗಾರ = ಕಟುಕ.

ಭಾವಃ— ಎಲೋ ಬ್ರಾಹ್ಮಣರಿರಾ, ನಿಮ್ಮ ನುಡಿ ಕೇಳಿದಲ್ಲಿ ಪುಣ್ಯ ಬರುತ್ತದೆಂಬುದು ಸುಳ್ಳಾಯಿತು. ಯಾಕಂದರೆ ನಿಮ್ಮ ಶಾಸ್ತ್ರದ ಮಾತುಗಳೆಂದರೆ ಹೋತಿಗೆ ಮಾತ್ರ ಮಾರಿ. ಅಂದ ಬಳಿಕ ನಿಮ್ಮ ಶಾಸ್ತ್ರವನ್ನು ನಾನು ಹೇಗೆ ನಂಬಲಿ? ಆದರೆ ನೀವು-ನಾವು ಕೊಲ್ಲುವದಿಲ್ಲ, ನಮ್ಮ ಯಜ್ಞೋಪವೀತವು ಕೊಲ್ಲುತ್ತದೆ, ಎಂದು ಹೇಳುತ್ತೀರಿ. ಆದರೆ ಹೀಗನ್ನುವ ನಿಮ್ಮಂಥ ಕಟುಕರಿಗೆ ನಾನೇನು ಹೇಳಲಿ?

(೫೫) ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು ಎಲೆ ಹೋತೇ ಅಳು ಕಂಡಾ. ವೇದವನೋದಿದವರ ಮುಂದೆ ಅಳು ಕಂಡಾ. ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ. ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ.

ಭಾವಃ-- ಶಾಸ್ತ್ರಗಳು ಬರೀ ಮಾತುಗಳು. ಅಂಥ ಮಾತುಗಳನ್ನು ನಂಬಿ ನನ್ನನ್ನು ಕೊಲ್ಲುತ್ತಾರೆಂದು ಎಲೇ ಹೋತೇ, ಅಳು ಕಂಡೆಯಾ. ವೇದವನೋದಿದ ಆ ಬ್ರಾಹ್ಮಣರ ಮುಂದೆ ಅಳು ಕಂಡೆಯಾ. ಇಂಥ ಶಾಸ್ತ್ರವನ್ನು ಕೇಳಿ ವಿಶ್ವಾಸವಿಟ್ಟು ನಡೆಯುವವರ ಮುಂದೆ ಅಳು ಕಂಡೆಯಾ. ನೀನು ಅತ್ತುದಕ್ಕೆ ನಮ್ಮ ಪರಮಾತ್ಮನು ತಕ್ಕದ್ದನ್ನು ಅವರಿಗೆ ಮಾಡುವನು.

(೫೬) ಮೊರನ ಗೊಟ್ಟಿಗೆ ಬಪ್ಪ ಕಿರುಕುಳ ದೈವಕ್ಕೆ ಕುರಿಯನಿಕ್ಕಿಹೆನೆಂದು ನಲಿನಲಿದಾಡುವರು! ಕುರಿ ಸತ್ತು ಕಾಯ್ವುದೇ, ಹರ ಮುಳಿದವರ? ಕುರಿ ಬೇಡ, ಮರಿ ಬೇಡ. ಬರಿಯ ಪತ್ರಿಯ ತಂದು ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

ಗೊಟ್ಟಿ = ಆಹಾರ ಪದಾರ್ಥ.

ಭಾವಃ— ಮೊರನಲ್ಲಿ ಬಲಿ ಇಟ್ಟಿದ್ದನ್ನು ತಿನ್ನಲಿಕ್ಕೆ ಬರುವ ಕಿರುಕುಳ ದೇವರಿಗೆ ಕುರಿ ಕೊಟ್ಟೆವೆಂದು ಜನರು ಬಲು ಹಿಗ್ಗುತ್ತಾರೆ. ಆದರೆ ಪರಮಾತ್ಮನು ಯಾರ ಮೇಲೆ ಸಿಟ್ಟಾಗಿದ್ದಾನೋ ಅಂಥವರನ್ನು ಸತ್ತ ಕುರಿಯು ಎಂದಾದರೂ ಸಂರಕ್ಷಿಸಬಹುದೇ? ಆದ್ದರಿಂದ ಕುರಿ ಕೊಡಬೇಡಿರಿ. ಅಥವಾ ಬಲಿ ಕೊಡಬೇಡಿರಿ. ಆದರೆ ಬರೀ ಪತ್ರಿಯನ್ನು ತಂದು ಪರಮಾತ್ಮನನ್ನು ಮರೆಯದೆ ಮಾತ್ರ ಪೂಜಿಸಿರಿ. ಭಕ್ತಿಯಿಂದ ಇಷ್ಟು ಮಾಡಿದರೆ ಪರಮಾತ್ಮನು ಒಲಿಯುವನೆಂದು ಬಸವೇಶ್ವರನ ಅಭಿಪ್ರಾಯವು.

ಜ್ಯೋತಿಷ್ಯವನ್ನು ನಂಬಬೇಡ.

(೫೭) ಅಂದು, ಇಂದು, ಮತ್ತೊಂದೆನಬೇಡ. ದಿನ ಒಂದೇ ಶಿವ ಶರಣೆಂಬುವಂಗೆ. ದಿನ ಒಂದೇ ಹರ ಶರಣೆಂಬುವಂಗೆ. ದಿನ ಒಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ.

ಮಾಣದೆ = ಬಿಡದೆ.

ಭಾವಃ— ಆ ದಿನ ಈ ದಿನ, ಮತ್ತೊಂದು ದಿನ ಎಂದು ದಿವಸಗಳಲ್ಲಿ ಭೇದ ಮಾಡಬೇಡ. 'ಎಲೋ ಶಿವನೇ ನಿನಗೆ ಶರಣು' ಎಂದು

ಅನ್ನುವವನಿಗೆ ಎಲ್ಲ ದಿನಗಳೂ ಒಂದೇಯಾಗಿರುತ್ತವೆ. 'ಎಲೋ ಹರನೇ ನಿನಗೆ ಶರಣು' ಎಂದು ಅನ್ನುವವನಿಗೆ ದಿನಗಳೆಲ್ಲವೂ ಒಂದೇ. ಪರಮಾತ್ಮನನ್ನು ನೆನೆಯುವವನಿಗೆ ದಿನಗಳೆಲ್ಲವೂ ಒಂದೇ.

(೩೮) ಲಗ್ನವೆಲ್ಲಿಯದೋ, ವಿಘ್ನವೆಲ್ಲಿಯದೋ ಸಂಗಯ್ಯ? ದೋಷವೆಲ್ಲಿಯದೋ, ದುರಿತವೆಲ್ಲಿಯದೋ ಸಂಗಯ್ಯ? ನಿಮ್ಮ ಮಾಣದೆ ನೆನೆವಂಗೆ ಭವಕರ್ಮವೆಲ್ಲಿಯದೋ ಕೂಡಲಸಂಗಮದೇವಯ್ಯ?

ದುರಿತ = ಪಾಪ; ಭವ = ಸಂಸಾರ.

ಭಾವಃ— ಎಲೋ ಪರಮಾತ್ಮನೇ ನಿನ್ನನ್ನು ನೆನೆಯುವಂಥವನಿಗೆ ಶುಭ ದಿನಗಳಿಲ್ಲ, ಅಶುಭ ದಿನಗಳಿಲ್ಲ, ದೋಷಗಳಿಲ್ಲ, ಪಾಪಗಳಿಲ್ಲ. ಪರಮಾತ್ಮನನ್ನು ಬಿಡದೆ ನೆನೆಯುವವನಿಗೆ ಸಂಸಾರಕ್ಕೆ ಸಂಬಂಧಿಸಿದ ಇಂಥ ಕರ್ಮಗಳಾವೂ ಇಲ್ಲ.

(೩೯) ಅಷ್ಟಮೀ ನವಮೀ ಎಂಬ ಕಲ್ಪಿತವೇಕೋ ಶರಣಂಗೆ? ತಪ್ಪಿತ್ತು ಗಣಪದವಿ. ಲಿಂಗಕ್ಕೆ ದೂರ. ಒಬ್ಬರಿಗಾಳಾಗಿ ಒಬ್ಬರನೋಲೈಸುವ ನಿರ್ಬುದ್ಧಿ ಮನುಜರನೇನೆಂಬೆ ಕೂಡಲಸಂಗಮದೇವ?

ಕಲ್ಪಿತ = ಭ್ರಮೆ; ಓಲೈಸು = ಸೇವೆಮಾಡು; ನಿರ್ಬುದ್ಧಿ = ಬುದ್ಧಿ ಇಲ್ಲದ; ಮನುಜ = ಮನುಷ್ಯ.

ಭಾವಃ— ಈ ದಿನ ಅಷ್ಟಮೀ, ಈ ದಿನ ನವಮೀ, ಎಂಬ ಭ್ರಮೆ ನಿಮಗೇಕೆ? ಇಂಥವನಿಗೆ ಗಣಪದವಿಯು ಸಿಕ್ಕಲಾರದು. ಅವನು ಪರಮಾತ್ಮನಿಗೆ ದೂರಾದವನು. ಒಬ್ಬರ ಸೇವೆಯನ್ನು ಮಾಡಿದ ಬಳಿಕ ಇನ್ನೊಬ್ಬರ ಸೇವೆ ಮಾಡುವ ಬುದ್ಧಿ ಇಲ್ಲದ ಇಂಥ ಜನರಿಗೆ ನಾನೇನೆನ್ನಲಿ?

(೪೦) ಎಮ್ಮವರು ಬೆಸಗೊಂಡರೆ, ಶುಭ ಲಗ್ನವೆನ್ನಿರಯ್ಯ. ರಾಶಿ ಕೂಟ ಋಣ ಸಂಬಂಧ ಉಂಟೆಂದು ಹೇಳಿರಯ್ಯ. ಚಂದ್ರಬಲ, ತಾರಾಬಲ ಉಂಟೆಂದು ಹೇಳಿರಯ್ಯ. ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ. ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ.

ಬೆಸಗೊಳ್ಳು = ಪ್ರಶ್ನೆ ಮಾಡು, ಕೇಳು.

ಭಾವಃ— ಶಿವಶರಣರು ನಿಮಗೆ ಮಾತನಾಡಿಸಿದರೆ ಅದು ಶುಭ ದಿನವೆಂದು ತಿಳಿಯಿರಿ. ರಾಶಿ ಕೂಟ, ಋಣಸಂಬಂಧ ಎಲ್ಲವೂ ಉಂಟಾಯಿತೆಂದು ತಿಳಿಯಿರಿ. ಆ ದಿನ ಚಂದ್ರಬಲ, ನಕ್ಷತ್ರಬಲ ಎಲ್ಲವೂ ಇವೆ ಎಂದು ತಿಳಿಯಬೇಕು. ನಾಳಿನ ದಿನಕ್ಕಿಂತ ಇಂದಿನ ದಿನವೇ ಲೇಸೆಂದು ತಿಳಿಯಿರಿ. ಯಾಕಂದರೆ ಯಾವ ದಿನ ಪರಮಾತ್ಮನನ್ನು ಪೂಜಿಸಿದರೂ ಅದರ ಫಲ ನಿಮಗಾಗುವದು ನಿಶ್ಚಯವು. ಅದು ದಿನದ ಮೇಲೆ ಅವಲಂಬಿಸಿಲ್ಲೆಂದು ಬಸವೇಶ್ವರನ ಅಭಿಪ್ರಾಯವು.

(೪೧) ಹಾವಡಿಗನು ಮೂಕೊರಿತೆಯು ತನ್ನ ಮಗನ ಮದುವೆಗೆ ಶಕುನವ ನೋಡ ಹೋಹಾಗ, ಇದಿರಿಲೊಬ್ಬ ಮೂಕೊರಿತೆಯ ಹಾವಡಿಗನ ಕಂಡು ಶಕುನ ಹೊಲ್ಲೆಂಬ ಚದುರನ ನೋಡಾ! ತನ್ನ ಕೈಯಲು ಹಾವು, ತಾನು ಮೂಕೊರೆಯು. ತನ್ನ ಭಿನ್ನವನರಿಯದೆ ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲಸಂಗಮದೇವಾ?

ಮೂಕೊರಿತೆ=ಮೂಗು ಕಳೆದುಕೊಂಡವಳು; ಹೊಲ್ಲ = ಕೆಡಕು.

ಭಾವಃ— ಒಬ್ಬ ಹಾವುಗಾರನು ಮೂಗು ಹೋದ ತನ್ನ ಹೆಂಡತಿಯನ್ನು ಕರೆದುಕೊಂಡು ತನ್ನ ಮಗನ ಮದುವೆಗೆ ಒಂದು ಶುಭ ಮುಹೂರ್ತ ಕೇಳಲಿಕ್ಕೆ ಹೋದಾಗ, ಅವನು ತನ್ನ ಇದಿರಿಗೆ ಇನ್ನೊಬ್ಬ ಹಾವುಗಾರ ಮತ್ತು ಮೂಗು ಹೋದವಳು ಇವರು ಬರುವದನ್ನು ಕಂಡು ನನಗೆ ಕೆಟ್ಟ ಶಕುನವಾಯಿತೆಂದು ತಿರುಗಿಬರುತ್ತಾನೆ. ಇವನು ಎಂಥ ಜಾಣನೆಂಬುದನ್ನು ಹೇಳಲಿ! ತನ್ನ ಕಯ್ಯಲ್ಲಿಯೇ ಹಾವು ಇದೆ. ತನ್ನ ಕೂಡ ಒಬ್ಬ ಮೂಕೊರೆಯು ಇದ್ದಾಳೆ. ತನ್ನ ಈ ಅಶುಭವನ್ನು ನೋಡದೆ ಬೇರೆಯವರ ಮೇಲೆ ಹೀಗೆ ದೋಷ ಇಡುವ ಈ ಕುನ್ನಿಗಳಿಗೆ ನಾನೇನೆನ್ನಲಿ?

(೪೨) ಶಕುನವೆಂದೆಂಬೆ, ಅವಶಕುನವೆಂದೆಂಬೆ. ನಿಮ್ಮವರು ಅಳಲಿಕೆ ಅಂದೇಕೆ ಬಂದೆ? ನಿಮ್ಮವರು ಅಳಲಿಕೆ ಇಂದೇಕೆ ಹೋದೆ? ನೀ ಹೋಹಾಗಳಕ್ಕೆ, ನೀ ಬಾಹಾಗಳಕ್ಕೆ. ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲಸಂಗಮದೇವನ.

ಅಕ್ಕೆ = ಶೋಕ, ದುಃಖ.

ಭಾವಃ— ಇದು ಉತ್ತಮ ಶಕುನ, ಇದು ಕೆಟ್ಟ ಶಕುನವಾಯಿತು ಎಂದು ನಾನು ಅನ್ನುತ್ತೇನೆ. ಆದರೆ ಎಲವೋ, ನೀನು ಹುಟ್ಟುವ

ಕಾಲದಲ್ಲಿ ನಿನ್ನನ್ನು ಹಡೆಯುವವಳು ಅಳುತ್ತಿರುತ್ತಾಳೆ. ಅಂದ ಬಳಿಕ ನೀನು ಆಗ ಈ ಜಗತ್ತಿನಲ್ಲಿ ಏಕೆ ಬಂದೆ? ನೀನು ಈ ಜಗತ್ತನ್ನು ಬಿಟ್ಟು ಹೋಗುವಾಗಲೂ ಅಳುತ್ತಿರುತ್ತಾರೆ. ಅಂದಬಳಿಕ ನೀನು ಈ ಜಗತ್ತನ್ನು ಬಿಟ್ಟು ಏಕೆ ಹೋಗುತ್ತೀ? ಈ ಪ್ರಕಾರ ನೀನು ಈ ಜಗತ್ತಿನಿಂದ ಸೋಗುವಾಗಲೂ ದುಃಖ, ಬರುವಾಗಲೂ ದುಃಖ. ಈ ದುಃಖಗಳು ಬಾರದ ಮುನ್ನ ಪರಮಾತ್ಮನನ್ನು ಪೂಜಿಸಬೇಕೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ.

ತೀರ್ಥಯಾತ್ರೆಗಳನ್ನು ಮಾಡಬೇಡ.

(೬೩) ಅಡಿಗಡಿಗೆ ಸ್ಥಾನ ನಿಧಿ. ಅಡಿಗಡಿಗೆ ದಿವ್ಯ ಕ್ಷೇತ್ರ. ಅಡಿಗಡಿಗೆ ನಿಧಿಯು ನಿಧಾನ ನೋಡಾ. ಅತನ ಇರವೇ ಅವಿಮುಕ್ತ ಕ್ಷೇತ್ರ, ಕೂಡಲಸಂಗನ ಶರಣ ಸ್ವತಂತ್ರನಾಗಿ.

ಅಡಿಗಡಿಗೆ = ಹೆಜ್ಜೆಹೆಜ್ಜೆಗೆ; ಸ್ಥಾನನಿಧಿ = ತೀರ್ಥಗಳ ಸಮುದಾಯ; ನಿಧಿ = ಹಣದ ಸಂಚಯ; ನಿಧಾನ = ದ್ರವ್ಯ; ಇರವು = ಇರುವ ಸ್ಥಳ; ಅವಿಮುಕ್ತ ಕ್ಷೇತ್ರ = ಕಾಶಿಯ ಸಮೀಪದಲ್ಲಿದ್ದ ಒಂದು ಕ್ಷೇತ್ರದ ಹೆಸರು.

ಭಾವಃ— ಶರಣನ ಹೆಜ್ಜೆಹೆಜ್ಜೆಗೆ ತೀರ್ಥಗಳ ಸಮುದಾಯವಿದೆ. ಅವನ ಹೆಜ್ಜೆ ಹೆಜ್ಜೆಗೆ ದಿವ್ಯ ಕ್ಷೇತ್ರಗಳಿವೆ. ಹೆಜ್ಜೆ ಹೆಜ್ಜೆಗೆ ಹಣದ ಸಂಚಯವಿದೆ, ದ್ರವ್ಯವಿದೆ. ಅವನು ಇರುವ ಸ್ಥಳವೇ ವಾರಣಾಸಿಯಲ್ಲಿರುವ ಅವಿಮುಕ್ತ ಕ್ಷೇತ್ರವು. ಯಾಕಂದರೆ ಅವನು ಸ್ವತಂತ್ರನಾಗಿರುತ್ತಾನೆ.

(೬೪) ಶರಣ ನಿದ್ರೆಗೈದರೆ ಜಪಕಾಣಿರೋ. ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೋ. ಶರಣ ನಡೆದುದೇ ಪಾವನ ಕಾಣಿರೋ. ಶರಣ ನುಡಿದುದೇ ಶಿವತತ್ತ್ವ ಕಾಣಿರೋ. ಕೂಡಲಸಂಗನ ಶರಣರ ಕಾಯವೇ ಕೈಲಾಸ ಕಾಣಿರೋ.

ಪಾವನ = ಪವಿತ್ರ.

ಭಾವಃ — ಪರಮಾತ್ಮನು ನಿದ್ರೆ ಮಾಡುತ್ತಿದ್ದರೆ ಅದು ಜಪವೆಂದು ತಿಳಿಯಬೇಕು. ಅವನು ಎದ್ದು ಕುಳಿತರೆ ಅದು ಶಿವರಾತ್ರೆ ಎಂದು

ತಿಳಿಯಬೇಕು. ಶರಣನು ನಡೆದದ್ದೇ ಪವಿತ್ರವಾಯಿತು. ಅವನು ನುಡಿದದ್ದೇ ಶಿವತತ್ವವು. ಅವನ ದೇಹವೇ ಕೈಲಾಸವೆಂದು ತಿಳಿಯಿರಿ.

(೬೫) ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೇ ಅಯ್ಯಾ? ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು. 'ಚಾಂಡಾಲ ವಾಟಿಕಾಯಾಂ। ಶಿವಭಕ್ತಸ್ಥಿತೋಯದಿ। ತತ್‌ಶ್ರೇಣಿ ಶಿವಲೋಕಸ್ಯ। ತದ್ಗೃಹಂ ಶಿವಮಂದಿರಂ' ಲೋಕದ ಡಂಭಕರ ಮಾತು ಬೇಡ. ಕೂಡಲ ಕೂಡಲಸಂಗನಿದ್ದುದೇ ಕೈಲಾಸ.

ಬಲ್ಲಹ = ಒಡೆಯ, ದೊರೆ; ಒಳವು = ಅಧೀನ, ಶಕ್ಯ.

ಭಾವಃ— ಒಬ್ಬ ದೊರೆಯು ಒಂದು ಸ್ಥಳದಲ್ಲಿ ಬಂದು ವಾಸಿಸ ಹತ್ತಲು ಅದು ಹೊಲೆಗೇರಿ ಇದ್ದರೂ ಅದಕ್ಕೆ ಈ ಹೆಸರು ಉಳಿದೀತೇ ಹೇಗೆ? ಅದರಂತೆ ಪರಮಾತ್ಮನು ಯಾರಲ್ಲಿ ಇರುತ್ತಾನೋ ಅವನ ಮನೆಯು ಕೈಲಾಸವೆಂದು ನಂಬಬೇಕು. ಚಾಂಡಾಲರಿರುವ ಸ್ಥಳದಲ್ಲಿ ಶಿವಭಕ್ತನು ವಾಸಿಸಿದರೆ ಅವನಿರುವ ಆ ಕೇರಿಯು ಶಿವಲೋಕದಲ್ಲಿಯದೆಂದು ಮತ್ತು ಅವನ ಮನೆಯು ಶಿವಮಂದಿರವೆಂದು ತಿಳಿಯಬೇಕು. ಈ ಪ್ರಕಾರ ಶಾಸ್ತ್ರವಿದೆ. ಜಗತ್ತಿನಲ್ಲಿರುವ ಡಾಂಭಿಕರ ಮಾತನ್ನು ನಂಬದೆ, ಪರಮಾತ್ಮನಿದ್ದ ಸ್ಥಳವೇ ಕೈಲಾಸವೆಂದು ತಿಳಿಯಿರಿ.

(೬೬) ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನ, ತ್ರೇತಾಯುಗದಲ್ಲಿ ವಾರಣಾಸಿ ಎಂಬ ಮೂಲಸ್ಥಾನ, ದ್ವಾಪರ ಯುಗದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ, ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ. ಇಂತೀ ನಾಲ್ಕು ಮೂಲ ಸ್ಥಾನ ನಾನಾ ಸ್ಥಾನವ ಮೆಟ್ಟದೆ, ಜಂಗಮವೇ ಲಿಂಗವೆಂದು ನಂಬಿದೆ ಕೂಡಲಸಂಗಮದೇವಾ.

ಭಾವಃ— ಕೃತಯುಗದಲ್ಲಿ ಕೇದಾರ, ತ್ರೇತಾಯುಗದಲ್ಲಿ ವಾರಣಾಸಿ, ದ್ವಾಪರದಲ್ಲಿ ವಿರುಪಾಕ್ಷ, ಕಲಿಯುಗದಲ್ಲಿ ಪರ್ವತ, ಹೀಗೆ ಆಯಾ ಕಾಲಗಳಲ್ಲಿ ಮೂಲ ಸ್ಥಾನಗಳಿವೆಯೆಂದು ಜನರು ತಿಳಿಯುತ್ತಾರೆ. ಆದರೆ ನಾನು ಹೀಗೆ ತಿಳಿದುಕೊಂಡು ಆ ಕ್ಷೇತ್ರಗಳಿಗೆ ಹೋಗದೆ, ಜಂಗಮವೇ ಲಿಂಗವೆಂದು ನಂಬಿ ನಡೆಯುತ್ತೇನೆಂದು ಬಸವೇಶ್ವರನು ಹೇಳುತ್ತಾನೆ.

(೬೭) ನೀರ ಕಂಡಲ್ಲಿ ಮುಳುಗುವರಯ್ಯಾ! ಮರನ ಕಂಡಲ್ಲಿ ಸುತ್ತುವರಯ್ಯಾ! ಬತ್ತುವ ಜಲವನೊಣಗುವ ಮರನ ಮೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲ ಸಂಗಮದೇವ?

ಭಾವಃ— ನದಿ, ಸರೋವರ ಮೊದಲಾದ ಜಲಾಶಯಗಳನ್ನು ನೋಡಿದಲ್ಲಿ ಅವುಗಳಲ್ಲಿ ಸ್ನಾನ ಮಾಡಿದರೆ ಪುಣ್ಯ ಬರುತ್ತದೆಂದು ತಿಳಿದು ಅವುಗಳಲ್ಲಿ ಮುಳುಗುತ್ತಾರೆ. ಅರಳಿ, ತುಳಸಿ, ಆಲ, ಇಂಥ ಗಿಡಗಳಿಗೆ ನಮಸ್ಕಾರ ಮಾಡಿದರೆ ತಮಗೆ ಶುಭವಾಗುವದೆಂದು ತಿಳಿದು ಅವುಗಳ ಸುತ್ತು ತಿರುಗುತ್ತಾರೆ. ಆದರೆ ಜಲವು ಬತ್ತುತ್ತದೆ. ಮರವು ಒಣಗುತ್ತದೆ. ಇಂಥ ನಾಶವಾಗುವ ಜೀನಸುಗಳನ್ನು ಮೆಚ್ಚಿದವರು ಪರಮಾತ್ಮನನ್ನು ತಿಳಿಯಲಾರರು.

(೬೮) ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ, ತೊರೆಯಿಂ ಭೋ, ತೊರೆಯಿಂ ಭೋ, ಪರನಾರಿಯ ಸಂಗವ ತೊರೆಯಿಂ ಭೋ. ಪರಧನದಾಮಿಷವ ತೊರೆಯಿಂ ಭೋ. ಇವ ತೊರೆಯದೆ ಹೋಗಿ, ತೊರೆಯ ಮಿಂದರೆ, ಬರುದೊರೆ ಹೋಹುದು ಕೂಡಲಸಂಗಮದೇವ.

ತೊರೆ = ಹೊಳೆ; ಮೀಯು = ಸ್ನಾನ ಮಾಡು; ತೊರೆ = ಬಿಟ್ಟುಬಿಡು; ಆಮಿಷ = ಇಚ್ಛೆ; ಬರುದೊರೆ = ಬರಿದಾದ ಹೊಳೆ.

ಭಾವಃ— ನದಿಗೆ ಹೋಗಿ ಸ್ನಾನ ಮಾಡುವ ಅಣ್ಣಗಳಿರಾ, ಸ್ವಾಮಿಗಳಿರಾ, ಇವುಗಳನ್ನು ನಂಬುವದನ್ನು ಬಿಟ್ಟು ಬಿಡಿರಿ. ನೀವು ಪರಸ್ತ್ರೀಯರ ಸಂಗವನ್ನು ಬಿಟ್ಟು ಬಿಡಿರಿ. ಪರರ ದ್ರವ್ಯವನ್ನು ಅಪಹಾರ ಮಾಡುವ ಇಚ್ಛೆಯನ್ನು ಬಿಟ್ಟು ಬಿಡಿರಿ. ಇವುಗಳನ್ನು ಬಿಡದೆ ಹಾಗೇ ಸ್ನಾನ ಮಾಡಿದರೆ, ವ್ಯರ್ಥ ಸ್ನಾನ ಮಾಡಿದಂತೆಯೇ ಸರಿ.

(೬೯) ಮೀಂಬುಲಿಗನ ಹಕ್ಕಿಯಂತೆ ನೀರ ತಡೆಯಲಿದ್ದು, ಮೂಗ ಹಿಡಿದು ಧ್ಯಾನವ ಮಾಡುವರಯ್ಯಾ! ಬಿಟ್ಟ ಮಂಡೆವೆರಸಿ ಬಾಯ ಮಿಡುಕಿಸುತೆ ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯಾ. ನಿಮ್ಮ ಕೆಯ್ಯಲ್ಲಿ ಕಟ್ಟಿದ ದರ್ಭೆಯ ಹುಲ್ಲು ಕೂಡಲಸಂಗನನರಿಯದೆ ಮೊರೆ ಇಡುವಂತೆ.

ಮೀಂಬುಲಿಗ = ಬಕಪಕ್ಷಿ; ತಡೆ = ದಂಡೆ; ಮಂಡೆ = ತಲೆ; ಮಿಡುಕು = ಅಲುಗಾಡಿಸು.

ಭಾವಃ—ಬಕಪಕ್ಷಿಯು ಜಪಮಾಡುತ್ತಿರುವಂತೆ ದಂಡೆಯ ಅಂಚಿನಲ್ಲಿ ನಿಂತುಕೊಂಡು ಮೀನುಗಳನ್ನು ಹಿಡಿಯುತ್ತದೆ. ಹಾಗೆಯೇ ನೀವು ಜಪ ಮಾಡುವವರಂತೆ ದಂಡೆಯ ಮೇಲೆ ಕುಳಿತು ಮನಸ್ಸಿನಲ್ಲಿ ಕುಯುಕ್ತಿಗಳನ್ನು ಎಣಿಸುವಿರಿ. ಜಟಾಧಾರಿಗಳಾಗಿರುವಿರಿ. ಬಾಯಲ್ಲಿ ಮಂತ್ರೋಚ್ಚಾರ ಮಾಡುವವರಂತೆ ತುಟಿಗಳನ್ನು ಅಲ್ಲಾಡಿಸುವಿರಿ. ಕಣ್ಣುಮುಚ್ಚಿ ಬೆರಳನ್ನು ಎಣಿಸುವಿರಿ. ಆದರೆ ಇವೆಲ್ಲ ನಿಮ್ಮ ಮೋಸಗಾರಿಕೆ. ಆಗ ನೀವು ಕಯ್ಯಲ್ಲಿ ಹಿಡಿದುಕೊಂಡು ದರ್ಭೆಯ ಹುಲ್ಲು ನೀವು ಪರಮಾತ್ಮನನ್ನು ಕಾಣದ್ದರಿಂದ ಅವನಿಗೆ ಶರಣು ಹೊಕ್ಕಂತೆಯೇ ಸರಿ.

(೭೦) ನಿಮ್ಮನರಿಯದ ಕಾರಣ ಕೆಯ್ಯಲ್ಲಿ ಹುಲ್ಲು. ನಿಮಗೆರಗದ ಕಾರಣ ಕೊರಳಲ್ಲಿ ನೇಣು. ಹಿಂಡಲೇಕೋ? ಕೂಡಲ ಸಂಗನ ಶರಣರಲ್ಲಿ ಡೋಹರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ?

ನೇಣು = ಹಗ್ಗ.

ಭಾವಃ—ಎಲೋ ಪರಮಾತ್ಮನೇ ಇಂಥ ಜನರು ನಿನ್ನನ್ನು ಅರಿಯದ ಕಾರಣ ಅವರು ಕಯ್ಯಲ್ಲಿ ಹುಲ್ಲು ಹಿಡಿದಿದ್ದಾರೆ. ನಿನಗೆ ನಮಸ್ಕಾರ ಮಾಡದ ಕಾರಣ ಅವರು ಕೊರಳಲ್ಲಿ ಯಜ್ಞೋಪವೀತವನ್ನು ಹಾಕಿಕೊಂಡಿದ್ದಾರೆ. ಇವರು ನದಿಯಲ್ಲಿ ಸ್ನಾನಮಾಡುತ್ತ ಬಟ್ಟೆಗಳನ್ನು ಹಿಂಡುತ್ತ ಏಕೆ ಕುಳ್ಳಿರಬೇಕು? ಪರಮಾತ್ಮನು ಶರಣರಲ್ಲಿ ಡೋಹರ ಕಕ್ಕಯ್ಯನು ಯಾವ ನದಿಯಲ್ಲಿ ಸ್ನಾನಮಾಡಿದನು ಹೇಳಿರಿ?

(೭೧) ಸತ್ಯ ಶೌಚದ ನಿತ್ಯ ನೇಮವ ತಪ್ಪದೆ ಮಾಡಬಲ್ಲಡೆ, ಅದು ಲೇಸು. ಮತ್ಸ್ಯ ಕೂರ್ಮ ಮಂಡೂಕ ಜಲದೊಳಗಿದ್ದಲ್ಲಿ ಫಲವೇನು? 'ಚಿತ್ತಮಂತರ್ಗತಂ ದುಷ್ಟಂ । ತೀರ್ಥ ಸ್ನಾನೇನ ಶುಧ್ಯತಿ । ಶತಶೋಂಭ ಜಲೆ ಶೌಚಂ । ಸುರಾಭಾಂಡಮಿವಾಶುಚಿ ।' ಅಗಡವ ಮಾಡಿ ಮಾಗಡವ ಮಿಂದರೆ, ತಾ ಕೊಡಬಲ್ಲನೇ ಕೂಡಲ ಸಂಗಮದೇವ?

ಶೌಚ = ಶುಚಿತ್ವ; ಮತ್ಸ್ಯ = ಮೀನು; ಕೂರ್ಮ = ಆಮೆ; ಮಂಡೂಕ = ಕಪ್ಪೆ; ಅಗಡು = ದುಷ್ಟತನ; ಮಾಗಡ = ಮಾಗಿಯ ಕಾಲ.

ಭಾವಃ—ನಡೆಯಲ್ಲಿ ಸತ್ಯ, ಶುಚಿತ್ವ ನಿತ್ಯನೇಮಗಳಿದ್ದರೆ ಅದು ಲೇಸು. ಮೀನು ಆಮೆ ಕಪ್ಪೆಗಳು ನೀರಲ್ಲಿ ಯಾವಾಗಲೂ ವಾಸಮಾಡು

ತ್ತವೆ. ಆದರೆ ಅದರ ಫಲವೇನು? ಹೊರಗೆ ಬರೀ ಸ್ನಾನ ಮಾಡಿದರೆ ಮನಸ್ಸಿನಲ್ಲಿರುವಂಥಾದ್ದು ಹೋಗದು. ಮದ್ಯವನ್ನು ತುಂಬಿದ ಗಡಿಗೆಯ ಮೇಲೆ ಒಂದು ನೂರು ಕೊಡ ನೀರು ಸುರಿದರೂ, ಆ ಗಡಿಗೆಯು ನಿರ್ಮಲವಾಗದೆಂದು ಶಾಸ್ತ್ರವು ಹೇಳುತ್ತಿದೆ. ದುಷ್ಟ ಕೃತ್ಯಗಳನ್ನು ಮಾಡಿ ಮಾಘಮಾಸದಲ್ಲಿ ನದಿಯಲ್ಲಿ ಸ್ನಾನಮಾಡಿದರೆ ಪರಮಾತ್ಮನು ಅವರಿಗೇನು ಕೊಡಬಲ್ಲನು?

(೭೨) ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡ ನೋಡಿರೋ. "ಭರ್ಗೋ ದೇವಸ್ಯ ಧೀಮಹಿ" ಎಂಬರು. ಒಬ್ಬರಿಗೂ ವಿಚಾರವಿಲ್ಲ ನೋಡಿರೋ ಕೂಡಲ ಸಂಗಮ ದೇವಾ.

ಹೊನಲು = ಹಳ್ಳ

ಭಾವ:—ವೇದಗಳನ್ನು ಓದುವ ಬ್ರಾಹ್ಮಣರು ನದಿ ಬಂದರೆ ಮುಳುಗಿ ಸತ್ತು ಹೋಗುತ್ತಾರೆ. ಅವರ ಈ ಕೇಡನ್ನು ನೋಡಿರಿ! ಅವರು "ಭರ್ಗೋ ದೇವಸ್ಯ ಧೀಮಹಿ" ಎಂದು ಗಾಯತ್ರೀ ಮಂತ್ರವನ್ನು ನದಿಯಲ್ಲಿ ನಿಂತು ಪಠಿಸುತ್ತಾರಲ್ಲ! ಎಲೋ ಪರಮಾತ್ಮನೇ ಇವರಿಗೂ ವಿಚಾರವಿಲ್ಲ ನೋಡಿರಿ.

ಪ್ರಾಯಶ್ಚಿತ್ತಗಳಿಲ್ಲ.

(೭೩) ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ, ಎಲವೋ, ಎಲವೋ, ಬ್ರಹ್ಮ ಹತ್ಯವ ಮಾಡಿದವನೇ, ಎಲವೋ ಶರಣೆನ್ನೆಲವೋ. ಒಮ್ಮೆ ಶರಣೆಂದಡೆ ಪಾಪಕರ್ಮ ಕೆಟ್ಟೋಡುವವು. ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದಾವೆ. ಓರ್ವಂಗೆ ಶರಣೆನ್ನಿ ನಮ್ಮ ಕೂಡಲ ಸಂಗಮ ದೇವಂಗೆ

ಐದಾವೆ = ಇರುತ್ತವೆ; ಓರ್ವ = ಒಬ್ಬ

ಭಾವ:— ಎಲವೋ ಎಲವೋ, ಪಾಪಗಳನ್ನು ಮಾಡಿದವನೇ, ಎಲವೋ ಎಲವೋ, ಬ್ರಹ್ಮಹತ್ಯವನ್ನು ಮಾಡಿದವನೇ, ಎಲೋ ಪರಮಾತ್ಮನೇ, ನಿನಗೆ ಶರಣು, ಎಂದು ಮಾತ್ರ ನೀನು ಅನ್ನು. ನೀನು, ಒಮ್ಮೆ

ಶರಣೆಂದರೆ, ಪಾಪ ಕರ್ಮಗಳೆಲ್ಲ ಕೆಟ್ಟು ಓಡಿಹೋಗುತ್ತವೆ. ನೀನು ಪ್ರಾಯಶ್ಚಿತ್ತ ಮಾಡಹೋದರೆ ನಿನಗೆ ಬಂಗಾರದ ಪರ್ವತಗಳೆಷ್ಟಿದರೂ ಸಾಲವು. ಆದ್ದರಿಂದ ಒಬ್ಬನೇ ಆದ ಪರಮಾತ್ಮನಿಗೆ 'ಶರಣು' ಎಂದು ಮಾತ್ರ ನೀನು ಭಕ್ತಿಯಿಂದ ಅನ್ನು. ಹೀಗೆ ಅಂದರೆ ಪಾಪಗಳೆಲ್ಲ ಹೊರಟು ಹೋಗುವವೆಂದು ಬಸವೇಶ್ವರನ ಅಭಿಪ್ರಾಯವು.

(೭೪) ಸದಾಚಾರ ಸದ್ಭಕ್ತಿ ಇಲ್ಲದವರನೊಲ್ಲನಯ್ಯ. ಆವರಾರಾಧನೆ ದಂಡ. ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ ಕೂಡಲಸಂಗಮ ದೇವ ಭೂಭಾರಕರ.

ನಿಚ್ಚ ನಿಚ್ಚ = ನಿತ್ಯ ನಿತ್ಯ, ಪ್ರತಿದಿವಸ; ಭೂಭಾರಕ = ಭೂಮಿಗೆ ಭಾರವಾದವ.

ಭಾವ:—ಪರಮಾತ್ಮನು ಸದಾಚಾರ ಸದ್ಭಕ್ತಿ ಇಲ್ಲದವರನ್ನು ಒಲ್ಲನು. ಇವರು ಮಾಡುವ ಆರಾಧನೆ ದಂಡ ಮಾತ್ರ. ಇವರು ಪ್ರತಿದಿನ ಪ್ರಾಯಶ್ಚಿತ್ತ ಮಾಡುತ್ತ ಭೂಮಿಗೆ ಭಾರವಾಗಿರುವರು. ಇಂಥವರನ್ನು ಪರಮಾತ್ಮನು ಒಲ್ಲನು.

(೭೫) ಕುಲದಲ್ಲಿ ಹಾರುವನು ಬ್ರಹ್ಮೇತಿ ಸಾರುವನು. ಆರೋ ಮಾಡಿದ ಪಾಪಕ್ಕೆ ತಾನೇ ಕೆಯ್ಯಾನುವನು. ಸರಿಯೋ ದೇವಭಕ್ತಂಗಿವನು? ಸರಿಯೋ ಲಿಂಗ ಭಕ್ತಂಗಿವನು? ಬಡಗಿ ಮಾಚಲ ದೇವಿಯು ಕುಲಜೆಯು ಮಾಡಿಹೆವೆಂದು ಹೊನ್ನ ಕಪಿಲೆಯ ರಾವಣದ ಶಾಖದ ಉಚ್ಛಿಷ್ಟದ ಕಾಲಿನಿಂದ ಕೂಳನಟ್ಟುಂಬವರ ನೇನೆಂಬೆನಯ್ಯ ಕೂಡಲಸಂಗಮ ದೇವ?

ಬ್ರಹ್ಮೇತಿ = ಬ್ರಹ್ಮಹತ್ಯ, ಬ್ರಾಹ್ಮಣನನ್ನು ಕೊಂದವ; ಕೆಯ್ಯಾನು = ಕಯ್ಯನ್ನು ಮುಂದೆಮಾಡು; ಕುಲಜೆ = ಶುದ್ಧ ಕುಲವುಳ್ಳವಳು; ಕಪಿಲೆ = ಆಕಳು; ರಾವಣಶಾಖ = ಔಡಲೆಲೆ; ಉಚ್ಛಿಷ್ಟ = ಎಂಜಲು.

ಭಾವ:— ಕುಲದಲ್ಲಿ ಬ್ರಾಹ್ಮಣನಾದವನು ಪ್ರಾಯಶ್ಚಿತ್ತದ ವಿಧಿಗಳನ್ನು ಜನರಿಗಾಗಿ ಮಾಡುತ್ತ ಅವರು ಮಾಡಿದ ಬ್ರಹ್ಮಹತ್ಯ ದೋಷಗಳನ್ನು ತಾನು ಸ್ವೀಕರಿಸುತ್ತಾನೆ. ಜನರು ಮಾಡುವ ಪಾಪಗಳಿಗೆ ಕೈಯೊಡ್ಡಿ ಅವುಗಳನ್ನು ತಾನೇ ತೆಗೆದುಕೊಳ್ಳುತ್ತಾನೆ. ದೇವಭಕ್ತನಿಗೆ ಇವನು ಎಂದಾದರೂ ಸರಿಯೇ? ಬಡಿಗಿಯ ಕುಲದವಳಾದ ಮಾಚಲ

ದೇವಿಯನ್ನು ಉಚ್ಚ ಕುಲದವಳನ್ನಾಗಿ ಮಾಡಬೇಕೆಂದು ಬಂಗಾರದ ಅಕ್ಕಳನ್ನು ಮಾಡಿಸಿ ಅದರ ಬಾಯಲ್ಲಿ ಅವಳನ್ನು ಹೊಗಿಸಿ ಪುಚ್ಚದಿಂದ ಎಳೆದು ಹಾಲಿನ ಕೊಪ್ಪರಿಗೆಯಲ್ಲಿ ಅವಳನ್ನು ಸ್ನಾನಮಾಡಿಸಿ, ಆ ಮುಸುರಿಯ ಹಾಲಲ್ಲಿ ಪಾಯಸ ಮಾಡಿಸಿ ಬಿಡಲ ಎಲೆಯಲ್ಲಿ ಕೂಳನ್ನು ತಿನ್ನುವಂಥ ಈ ಬ್ರಾಹ್ಮಣನಿಗೆ ನಾನೇನೆನ್ನಲಿ?

ಕರ್ಮಠನಾಗಬೇಡ.

(೭೬) ಕಣ್ಣ ಮುಚ್ಚಿ ಕನ್ನಡಿಯ ತೋರುವಂತೆ, ಇರುಳು ಹಗಲು ನಿದ್ರೆ ಸಾಲದೇ? ಬೆರಳನೆಣಿಸಿ ಪರಮಾರ್ಥವ ಹಡೆವುದು. ಚೋದ್ಯವಲ್ಲವೇ ಹೇಳಾ? ಮೂಗ ಮುಚ್ಚಿ ಮುಕ್ತಿಯ ಬಯಸುವರ ನಾಚಿಕೆ ಇಲ್ಲದವರ ನಾನೇನೆಂಬೆ ಕೂಡಲಸಂಗಮ ದೇವಾ?

ಭಾವಃ—ಕಣ್ಣನ್ನು ಮುಚ್ಚಿ ಕನ್ನಡಿಯನ್ನು ತೋರಿಸಿದಂತೆ ನಿಮ್ಮ ಧ್ಯಾನವು. ಇಂಥ ಕನ್ನಡಿಯಲ್ಲಿ ಮುಖವು ಹೇಗೆ ಕಂಡೀತು? ಇದರಂತೆ ಜ್ಞಾನವು ನಿಮಗೆ ಅಳವಡದು. ನೀವು ಹಗಲು ರಾತ್ರಿ ನಿದ್ರೆ ಮಾಡಿದರೂ ಅದು ನಿಮಗೆ ಸಾಲದು. ನೀವು ಬೆರಳನ್ನು ಎಣಿಸುತ್ತ ಪರಮಾತ್ಮನನ್ನು ದೊರಕಿಸುವೆನೆಂದು ಆಶೆ ಮಾಡುತ್ತೀರಿ. ಇದು ಆಶ್ಚರ್ಯವಲ್ಲವೇ? ಮೂಗನ್ನು ಮುಚ್ಚಿಕೊಂಡಲ್ಲಿ ಮುಕ್ತಿಯಾಗುವದೆಂದು ಅದನ್ನು ಆಶೆಮಾಡುವವರು ನಾಚಿಕೆಗೇಡಿಗಳು. ಎಲೋ ಪರಮಾತ್ಮನೇ ಇಂಥವರಿಗೆ ನಾನೇನು ಅನ್ನಲಿ?

(೭೭) ಹುತ್ತವ ಬಡಿದಡೆ ಹಾವು ಸಾಯಬಲ್ಲುದೇ ಅಯ್ಯ? ಅಘೋರ ತಪವ ಮಾಡಿದಡೇನು? ಅಂತರಂಗದಾತ್ಮ ಶುದ್ಧವಿಲ್ಲದವರ ಎಂತು ನಂಬುವೆನಯ್ಯ ಕೂಡಲಸಂಗಮ ದೇವ?

ಅಘೋರ = ಕಠಿಣವಾದ, ಉಗ್ರ.

ಭಾವಃ - ಹುತ್ತಿನ ಬಾಯಮೇಲೆ ಬಡಿದರೆ ಅದರ ಒಳಗಿರುವ ಹಾವು ಎಂದಾದರೂ ಸಾಯಬಹುದೇ? ಹಾಗೆಯೇ ಉಗ್ರ ತಪಸ್ಸುಮಾಡಿದರೇನು? ನಿಮ್ಮ ಒಳಗಿರುವ ಆತ್ಮವು ಶುದ್ಧವಿಲ್ಲದೆ ಹೋದರೆ ಪರಮಾತ್ಮನು ನಿಮ್ಮನ್ನು ಹೇಗೆ ನಂಬುವನು?

(೭೮) ಹಾಲನೇಮ, ಹಾಲಕೆನೆಯ ನೇಮ, ಕೆನೆಯು ತಪ್ಪಿದ ಬಳಿಕ ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮ. ಅಂಬಲಿಯ ನೇಮದವರನಾರನೂ ಕಾಣೆ. ಕೂಡಲಸಂಗನ ಶರಣರಲ್ಲಿ ಅಂಬಲಿಯ ನೇಮದಾತ ಮಾದರ ಚನ್ನಯ್ಯಂಗಾಯಿತ್ತು

ಭಾವಃ—ಜನರು ಅನೇಕ ತರದ ನೇಮಗಳನ್ನು ಇಟ್ಟುಕೊಳ್ಳುತ್ತಾರೆ. ತಾವು ಹಾಲಿನ ಮೇಲೆ ಇರುವೆವೆಂತಲೂ ಅದಿಲ್ಲದಿದ್ದರೆ ಹಾಲಿನ ಕೆನೆಯ ನೇಮ, ಅದು ತಪ್ಪಿದರೆ ಕಿಚ್ಚಡಿಯ ನೇಮ, ಆಮೇಲೆ ಬೆಣ್ಣೆಯ ನೇಮ, ಬೆಲ್ಲದ ನೇಮ ಮಾಡಿಕೊಂಡು ಇವುಗಳ ಮೇಲೆ ತಾವಿರುತ್ತೇವೆಂದು ಹೇಳಿಕೊಂಡು ನಡೆಯುತ್ತಾರೆ. ಆದರೆ ಅಂಬಲಿಯಮೇಲೆ ಜೀವಿಸುತ್ತೇವೆಂದು ಅದರ ನೇಮವನ್ನು ಯಾರೂ ಮಾಡಿಕೊಳ್ಳುವದಿಲ್ಲ. ಅಂದರೆ ಬಡತನದಲ್ಲಿದ್ದುಕೊಂಡು ಪರಮಾತ್ಮನ ಸೇವೆ ಮಾಡುವವರನ್ನು ನಾನು ಯಾರನ್ನೂ ಕಂಡಿಲ್ಲೆಂದು ಬಸವೇಶ್ವರನ ಅಭಿಪ್ರಾಯವು. ಪರಮಾತ್ಮನ ಶರಣರಲ್ಲಿ ಹೀಗೆ ಇದ್ದಾತನು ಮಾದರ ಚನ್ನಯ್ಯನೊಬ್ಬನು ಮಾತ್ರ.

(೭೯) ಬಂದುದ ಕೈಕೊಳ್ಳ ಬಲ್ಲರೆ ನೇಮ. ಇದ್ದುದ ವಂಚನೆಯ ಮಾಡದಿದ್ದರೆ ಅದು ನೇಮ. ನಡೆದು ತಪ್ಪದಿದ್ದರೆ ನೇಮ. ನುಡಿದು ಹುಸಿಯದಿದ್ದರೆ ಅದು ನೇಮ. ನಮ್ಮ ಕೂಡಲಸಂಗನ ಶರಣರು ಬಂದರೆ ಒಡೆಯರಿಗೊಡವೆಯನರ್ಪಿಸುವುದೇ ನೇಮ.

ಭಾವಃ—ಮನುಷ್ಯನಿಗೆ ಅನೇಕ ಕಷ್ಟಗಳು ಬರುತ್ತವೆ. ಬಂದರೂ ಸಮಾಧಾನದಿಂದಿರುವದೇ ನೇಮವು. ಶ್ರೀಮಂತಿಕೆ ಇರುವಾಗ ವಂಚನೆ ಮಾಡದಿದ್ದರೆ ಅದು ನೇಮವು. ನಡೆಯಲ್ಲಿ ತಪ್ಪಿ ವರ್ತಿಸದಿದ್ದರೆ ಅದು ನೇಮವು. ಮಾತಿನಲ್ಲಿ ಸುಳ್ಳಾಡದಿದ್ದರೆ ಅದು ನೇಮವು. ಪರಮಾತ್ಮನ ಶರಣರು ಬಂದಾಗ್ಗೆ ಅವರಿಗೆ ಪದಾರ್ಥಗಳನ್ನು ಸಲ್ಲಿಸುವದೇ ನೇಮವು. ಇಲ್ಲಿ ನೇಮವಾವುದನ್ನು ಬಸವೇಶ್ವರನು ಹೇಳಿದ್ದಾನೆ.

(೮೦) ಆದಿಪುರಾಣ ಅಸುರರಿಗೆ ಮಾರಿ. ವೇದಪುರಾಣ ಹೋತಿಂಗೆ ಮಾರಿ. ರಾಮಪುರಾಣ ರಕ್ಕಸರಿಗೆ ಮಾರಿ. ಭಾರತಪುರಾಣ ಗೋತ್ರಕ್ಕೆ ಮಾರಿ. ಇವೆಲ್ಲ ಪುರಾಣವು ಕರ್ಮಕ್ಕೆ ಮೊದಲು. ನಿಮ್ಮ ಪುರಾಣಕ್ಕೆ ಸರಿ ಇಲ್ಲ ಕೂಡಲಸಂಗಮದೇವಾ.

ಅಸುರರು = ರಾಕ್ಷಸರು; ರಕ್ಕಸ = ರಾಕ್ಷಸ.

ಭಾವ - ಪುರಾಣಗಳು ದೊಡ್ಡವೆಂದು ಅವುಗಳನ್ನು ನೀವು ನಂಬುತ್ತೀರಿ. ಆದರೆ ವಿಚಾರಮಾಡಿ ನೋಡಿದಲ್ಲಿ ಆದಿಪುರಾಣವು ಅಸುರರನ್ನು ಕೊಂದಿದ್ದನ್ನು ಹೇಳುತ್ತದೆ. ವೇದಗಳು ಹೋತನ್ನು ಕೊಲ್ಲುವದನ್ನು ಹೇಳುತ್ತವೆ. ರಾಮಾಯಣವು ರಾಕ್ಷಸರನ್ನು ಕೊಂದಿದ್ದನ್ನು ಹೇಳುತ್ತದೆ. ಮಹಾಭಾರತವು ಅಣ್ಣತಮ್ಮಂದಿರನ್ನು ಕೊಂದಿದ್ದು ಹೇಳುತ್ತದೆ. ಈ ಪ್ರಕಾರ ಈ ಎಲ್ಲ ಪುರಾಣಗಳಿಗೆ ಕರ್ಮವೇ ಮೊದಲಾಗಿದೆ. ಎಲೋ ಪರಮಾತ್ಮನೇ ನಿನ್ನ ಪುರಾಣಕ್ಕೆ ಯಾವ ಪುರಾಣವೂ ಸರಿಯಲ್ಲ.

(೮೧) ವೇದಶಾಸ್ತ್ರದವರ ಹಿರಿಯರೆಂಬೆನೇ? ಮಾಯಾ ಭ್ರಾಂತಿ. ಕವಿತೆ ಗೀತಜ್ಞರ ಹಿರಿಯರೆಂಬೆನೇ? ಇವರು ಹಿರಿಯರುಗಳೇ ಯಾಗ ನಟ್ಟುವಿಗ ಪಾಣ್ಬರು? ಇವರಿಂದಧಿಕವ ಸಾಧಿಸುವರೇನು ಕಿರಿಯರೇ? ಅಂತು ವಿದ್ಯಾ, ಗುಣ, ಜ್ಞಾನ, ಧರ್ಮಾಚಾರ, ಶೀಲಂಗಳ ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯನೆ ಸಾಧಿಸು.

ನಟ್ಟುವಿಗ = ಕುಣಿಯುವವ; ಪಾಣ್ಬ = ಹಾದರಮಾಡುವವ.

ಭಾವಃ--ವೇದಗಳನ್ನೂ ಶಾಸ್ತ್ರಗಳನ್ನೂ ಅಭ್ಯಾಸ ಮಾಡಿದವರು ಹಿರಿಯರೆಂದು ಹೇಳಬೇಕೇ? ಇವೆಲ್ಲವೂ ಮಾಯಾ ಭ್ರಾಂತು. ಕವಿತೆ ಮತ್ತು ಹಾಡು ಬಲ್ಲವರು ಹೆಚ್ಚಿನವರೆಂದು ಹೇಳಬೇಕೇ? ಯಾರು ಯಾಗಗಳನ್ನು ಮಾಡುವಾಗ ಮತ್ತು ಕುಣಿಯುವಾಗ ಹಾಡುತ್ತಾರೋ, ಯಾರು ಹಾದರ ಮಾಡುತ್ತಾರೋ, ಅವರೆಂದಾದರೂ ಹಿರಿಯರೇ? ಆದರೆ ಇವರಿಗಿಂತಲೂ ಹೆಚ್ಚಿನದನ್ನು ಸಾಧಿಸುವವರೇನು ಕಡಿಮೆಯೋ? ನಮ್ಮ ಶರಣರು ವಿದ್ಯೆ, ಸದ್ಗುಣ, ಜ್ಞಾನ, ಧರ್ಮಾಚಾರ, ಶೀಲ ಇವುಗಳನ್ನು ಸಾಧಿಸಿ ಹೆಚ್ಚಿನವರೆಂದೆನಿಸಿಕೊಂಡರು. ಅವರು ಸಾಧಿಸಿದ ಸಾಧನೆಯನ್ನು ಸಾಧಿಸಬೇಕೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ.

ಪರಮಾತ್ಮನು ತನ್ನಲ್ಲಿಯೇ ಇದ್ದಾನೆ.

(೮೨) ಮನ ವಂಚನೆಯು ಅನ್ಯ ಲಿಂಗಾರ್ಚನೆ. ಅದು ನಿಜವಲ್ಲ, ನಿಜವಲ್ಲ, ಕೂಡಲ ಸಂಗಮದೇವ ಮನದಂತರ್ಯಾಮಿ ತಾನಾಗಿ.

ಅಂತರ್ಯಾಮಿ = ಒಳಗಿರುವವ.

ಭಾವಃ---ನೀವು ಹೊರಗೆ ಸ್ಥಾವರ ಲಿಂಗಗಳನ್ನು ಪೂಜಿಸುತ್ತೀರಿ. ಹಾಗೆ ಪೂಜಿಸುವದು ನಿಮ್ಮ ಮನಸ್ಸನ್ನು ನೀವೇ ವಂಚಿಸಿಕೊಂಡಂತೆ. ಇಂಥ ಪೂಜೆಯು ನಿಜವಲ್ಲ, ನಿಜವಲ್ಲ. ಯಾಕಂದರೆ ಪರಮಾತ್ಮನು ನಮ್ಮ ಹೊರಗೆ ಇಂದೆ ನಿಮ್ಮ ಮನಸ್ಸಿನಲ್ಲಿಯೇ ಇರುತ್ತಾನೆ.

(೮೩) ಕಣ್ಣೊಳಗೆ ಕಣ್ಣಿದ್ದು ಕಾಣಲೇಕರಿಯರಯ್ಯ? ಕಿವಿಯೊಳಗೆ ಕಿವಿ ಇದ್ದು ಕೇಳಲೇಕರಿಯರಯ್ಯ? ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕರಿಯರಯ್ಯ? ಜಿಹ್ವೆಯೊಳಗೆ ಜಿಹ್ವೆ ಇದ್ದು, ರುಚಿಸಲೇಕರಿಯರಯ್ಯ? ಸ್ಪರ್ಶನದೊಳಗೆ ಸ್ಪರ್ಶನವಿದ್ದು, ಮುಟ್ಟಲೇಕರಿಯರಯ್ಯ? ಪ್ರಾಣದೊಳಗೆ ಪ್ರಾಣವಿದ್ದುದನೇಕರಿಯರಯ್ಯ? ಕಾಯದೊಳಗೆ ಕಾಯವಿದ್ದು, ಬಿಚ್ಚಿ ಬೇರಾಗದು. ಕೂಡಲ ಸಂಗಮದೇವ ನೀನಿಕ್ಕಿದ ಅಣಕದ ಭೇದವ ಭೇದಿಸಬಾರದಯ್ಯಾ.

ಅಣಕ = ಚೇಷ್ಟೆಯ ಮಾತು.

ಭಾವಃ—ಪರಮಾತ್ಮನು ನಿಮ್ಮಲ್ಲಿಯೇ ಇದ್ದಾನೆಂದು ತಿಳಿದು ನಡೆಯಬೇಕು. ನಿಮ್ಮ ಕಣ್ಣೊಳಗೆ ಕಣ್ಣಿದೆ. ಅದರಿಂದ ನೀವೇಕೆ ನೋಡಬಾರದು? ನಿಮ್ಮ ಕಿವಿಯೊಳಗೆ ಕಿವಿ ಇದೆ. ಅದರಿಂದ ನೀವೇಕೆ ಕೇಳಬಾರದು? ನಿಮ್ಮ ಮೂಗಿನೊಳಗೆ ಮೂಗಿದೆ. ಅದರಿಂದ ನೀವೇಕೆ ವಾಸಿಸಬಾರದು? ನಿಮ್ಮ ನಾಲಿಗೆಯೊಳಗೆ ನಾಲಿಗೆ ಇದೆ. ಅದರಿಂದ ನೀವೇಕೆ ರುಚಿಸಬಾರದು? ನಿಮ್ಮ ಸ್ಪರ್ಶನದೊಳಗೆ ಸ್ಪರ್ಶನವಿದೆ. ಅದರಿಂದ ನೀವೇಕೆ ಮುಟ್ಟಬಾರದು? ನಿಮ್ಮ ಪ್ರಾಣದೊಳಗೆ ಪ್ರಾಣವಿದೆ. ಅದನ್ನು ನೀವೇಕೆ ತಿಳಿಯಬಾರದು? ನಿಮ್ಮ ಶರೀರದಲ್ಲಿ ಇನ್ನೊಂದು ಶರೀರವಿದ್ದು ಅವೆರಡೂ ಕೂಡಿಯೇ ಇರುತ್ತವೆ. ಎಲೋ ಪರಮಾತ್ಮನೇ, ಮನುಷ್ಯನಲ್ಲಿ ನೀನು ಮಾಡಿದ ಇದೊಂದು ಸಮಸ್ಯೆಯು. ಇದು ನೀನು ಮಾಡಿದ ಒಂದು ಚೇಷ್ಟೆಯು. ಇದರ ಮರ್ಮವು ಯಾರಿಗೂ ತಿಳಿಯುವದಿಲ್ಲ.

(೮೪) ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡುವೆನಯ್ಯಾ? ಬಡವನು. ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನ ಕಲಶವಯ್ಯ! ಕೂಡಲಸಂಗಮದೇವ ಕೇಳಯ್ಯ ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಭಾವ:—ದ್ರವ್ಯವಿದ್ದವರು ಶಿವಾಲಯವನ್ನು ಕಟ್ಟಿಸುತ್ತಾರೆ. ಆದರೆ ನಾನೇನು ಕಟ್ಟಿಸಲಿ? ನಾನು ಬಡವನು. ನನಗೆ ನನ್ನ ಕಾಲುಗಳೇ ಕಂಭ

ಗಳು. ನನ್ನ ದೇಹವೇ ದೇವಾಲಯವು. ನನ್ನ ಶಿರಸ್ಸೇ ಅದರ ಬಂಗಾರದ ಕಲಶವು. ಎಲೋ ಪರಮಾತ್ಮನೇ ಕೇಳು. ಹೊರಗಿರುವ ಸ್ಥಾವರ ಲಿಂಗಗಳಿಗೆ ನಾಶವಿರುತ್ತದೆ. ಆದರೆ ನನ್ನ ಅಂತರಂಗದಲ್ಲಿರುವ ಜಂಗಮ ಲಿಂಗಕ್ಕೆ ನಾಶವೆಂಬುದಿಲ್ಲ.

(೮೫) ಕಾಯದ ಗಡಣ ಕೆಲಬರಿಗುಂಟು. ಜೀವದ ಗಡಣ ಕೆಲಬರಿಗುಂಟು. ಭಾವದ ಗಡಣ ಕೆಲಬರಿಗುಂಟು. ವಚನದ ಗಡಣ ಕೆಲಬರಿಗುಂಟು. ಪ್ರಾಣಲಿಂಗದ ಗಡಣ ಆರಿಗೂ ಇಲ್ಲ, ಕೂಡಲಸಂಗನ ಶರಣರೊಳಗೆ ತಂಗಟೂರು ಮಾರಯ್ಯಂಗಲ್ಲದೆ.

ಗಡಣ = ಗಣನೆ, ವಿಚಾರ, ಚಿಂತೆ.

ಭಾವ: – ಶರೀರದ ಚಿಂತೆ ಕೆಲವರಿಗಿರುತ್ತದೆ. ಕೆಲವರಿಗೆ ತಮ್ಮ ಜೀವದ ಚಿಂತೆ ಇರುತ್ತದೆ. ಕೆಲವರಿಗೆ ತಮ್ಮ ಭಾವದ ಚಿಂತೆ, ಕೆಲವರಿಗೆ ತಮ್ಮ ಮಾತಿನ ಚಿಂತೆ ಇರುತ್ತದೆ. ಆದರೆ ಪ್ರಾಣಲಿಂಗದ ಚಿಂತೆ ಯಾರಿಗೂ ಇರುವದಿಲ್ಲ. ಪರಮಾತ್ಮನ ಶರಣರಲ್ಲಿ ತಂಗಟೂರು ಮಾರಯ್ಯನಿಗೆ ಮಾತ್ರ ಇಂಥ ಚಿಂತೆ ಇರುತ್ತದೆ.

(೮೬) ಶರಣಸನ್ನಿಹಿತ ಐಕ್ಯವಹಲ್ಲಿ, ಹರಿಬ್ರಹ್ಮಾದಿಗಳು ಮೊದಲಾದ ಮೂವತ್ತುಮೂರು ದೇವರ್ಕಳು ಉಘೆ, ಉಘೇ ಎನುತಿರಲು, ಐಕ್ಯವಹವಂಗೆ ಠಾವಾವುದಯ್ಯಾ ಎಂದಡೆ, ಅಂಗದ ಕಳೆಯ ಬಲದಲ್ಲಿ ಬ್ರಹ್ಮನ ಸ್ಥಾನ, ಎಡದಲ್ಲಿ ನಾರಾಯಣನ ಸ್ಥಾನ. ಒಲ್ಲೆನಯ್ಯಾ! ಕೊರಳು ಗರಳ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ, ನಾಶಿಕ ವಾಯುವಿನ ಸ್ಥಾನ, ಕಂಗಳು ಅಗ್ನಿಯ ಸ್ಥಾನ, ಜಡೆಯು ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ, ಹಿಂದು ಸೂರ್ಯನ ಸ್ಥಾನ, ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನ, ಗುಹ್ಯ ಕಾಮನ ಸ್ಥಾನ, ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗಸ್ಥಾನ, ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ ಇಂತೀಸ್ಥಾನಂಗಳ ನಾನೊಲ್ಲೆನಯ್ಯಾ. ಹೃದಯ ಮಧ್ಯದಂತರಾಳದ ನಿರಾಳದ ಏಕಪೀಠದ ಸಿಂಹಾಸನದ ತೆರಪ ಕಂಡು ಕೂಡಲಸಂಗಮದೇವಾ.

ಸನ್ನಿಹಿತ = ಸಮೀಪದಲ್ಲಿರುವ; ಗರಳ = ವಿಷ; ನೊಸಲು = ಹಣೆ; ಕಪಾಲ = ತಲೆಡಮಿಗೆ; ಖಟ್ವಾಂಗ – ಹೊರಸಿನ ಕಾಲು, ಶಿವನ ಒಂದು ಆಯುಧ; ಡಮರುಗ = ಒಂದು ತರದ ಮದ್ದಲೆ; ನಾಗೇಂದ್ರ = ಶೇಷ; ನಿರಾಳ = ಸಂಶಯವಿಲ್ಲದ ಸ್ಥಿತಿ, ಶುದ್ಧ; ತೆರಪು = ಸ್ಥಳ.

ಭಾವಃ— ಶರಣರಲ್ಲಿದ್ದುಕೊಂಡು ನಾನು ಲಿಂಗೈಕ್ಯವಾಗುವ ಸಮಯದಲ್ಲಿ ಹರಿ ಬ್ರಹ್ಮ ಮೊದಲಾದ ಮೂವತ್ತುಮೂರು ದೇವತೆಗಳು ಉಘೇ ಉಘೇ ಎಂದು ಘೋಷಿಸುತ್ತಿರುವಾಗ ಪರಮಾತ್ಮನಲ್ಲಿಯ ಯಾವ ಸ್ಥಳವು ನನಗೆ ಬೇಕೆಂದು ನೀವು ಕೇಳಿದರೆ, ಚೈತನ್ಯಾತ್ಮಕವಾದ ಆತನ ಶರೀರದ ಬಲಭಾಗದಲ್ಲಿ ಬ್ರಹ್ಮನಿದ್ದಾನೆ, ಆತನ ಎಡಭಾಗದಲ್ಲಿ ನಾರಾಯಣನಿದ್ದಾನೆ, ಈ ಸ್ಥಾನಗಳು ನನಗೆ ಬೇಡ. ಅವನ ಕೊರಳಲ್ಲಿ ವಿಷವಿದೆ, ಅವನ ಬಾಯಲ್ಲಿ ನೀರು, ಮೂಗಿನಲ್ಲಿ ವಾಯು, ಕಣ್ಣಿನಲ್ಲಿ ಅಗ್ನಿಯು, ಜಡೆಯಲ್ಲಿ ಗಂಗೆಯು, ಹಣೆಯಲ್ಲಿ ಚಂದ್ರನು, ಬೆನ್ನಲ್ಲಿ ಸೂರ್ಯನು, ಕಾಲುಗಳಲ್ಲಿ ಅಷ್ಟದಿಕ್ಪಾಲಕರು, ಗುಹ್ಯದಲ್ಲಿ ಕಾಮನು, ಹಸ್ತಗಳಲ್ಲಿ ತಲೆಡಮಿಗೆಗಳು, ಖಟ್ವಾಂಗವೆಂಬ ಆಯುಧವು, ತ್ರಿಶೂಲವು ಮತ್ತು ಡಮರುಗಳು ಇವೆ. ಅವನು ತನ್ನ ದೇಹದಲ್ಲಿ ರುಂಡಮಾಲೆಯನ್ನು ಧರಿಸಿದ್ದಾನೆ. ಕಿವಿಯಲ್ಲಿ ಶೇಷನೆಂಬ ಒಂದು ಮಹಾ ಸರ್ಪವಿದೆ. ಇಂಥ ಅವನ ಯಾವ ಸ್ಥಳವೂ ನನಗೆ ಬೇಡ. ಆದರೆ ಅವನ ಹೃದಯದ ಅಂತರಾಳದಲ್ಲಿ ಅತಿ ಶುದ್ಧವಾದ ಯಾವ ಒಂದೇ ಒಂದಾದ ಪೀಠವಿದ್ದು ಅದು ಅವನಿಗೆ ಸಿಂಹಾಸನವಾಗಿರುತ್ತದೆಯೋ ಅದರ ಮೇಲೆ ನನಗೆ ಕುಳ್ಳಿರಲಿಕ್ಕೆ ಸ್ವಲ್ಪ ಸ್ಥಾನ ಕೊಡು ಎಂದು ಬಸವೇಶ್ವರನು ಅತ್ಯಂತ ಭಾವನಾಮಯವಾದ ರೀತಿಯಿಂದ ಪರಮಾತ್ಮನಲ್ಲಿ ಸಾಮರಸ್ಯ ಹೊಂದಬೇಕೆಂಬ ಅಪೇಕ್ಷೆಯಿಂದ ಈ ವಚನವನ್ನು ನುಡಿದಿದ್ದಾನೆ.

(೮೭) ಕಂಡ ಕನಸು ನಿಧಾನವ ಕಂಡೆನಯ್ಯ! ಬಿಡಲಾರದ ನಿಧಾನವ ಕಂಡೆನಯ್ಯ! ಕೂಡಲಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ.

ನಿಧಾನ = ದ್ರವ್ಯಸಂಚಯ.

ಭಾವಃ—ನನಗೆ ಜ್ಞಾನವಾಗಲು, ಅದೊಂದು ಬೊಕ್ಕಸವನ್ನು ಕಂಡಂತಾಯಿತು, ಎಂದಿಗೂ ಬಿಡಲಾರದಂಥ ಬೊಕ್ಕಸವನ್ನು ಕಂಡಂತಾಯಿತು. ನಾನೀಗ ಪರಮಾತ್ಮನೆಂಬ ಬೊಕ್ಕಸವನ್ನು ಕಂಡೆನು. ಇನ್ನುಮೇಲೆ ಅದನ್ನು ಬಿಡಲಾರೆನು.

ಪರಮಾತ್ಮನನ್ನು ತನ್ನಲ್ಲಿಯೇ ಕಾಣುವುದು.

(೮೮) ಅಹಂಕಾರ ಮನವನಿಂಬುಗೊಂಡಲ್ಲಿ, ಲಿಂಗ ತಾನೆಲ್ಲಿ ಪ್ಪುದೋ? ಅಹಂಕಾರಕ್ಕೆ ಎಡೆಗೊಡದೆ, ಲಿಂಗ ತನುವಾಗಿರಬೇಕು. ಅಹಂಕಾರ ರಹಿತನಾದಲ್ಲಿ ಸನ್ನಿಹಿತ ಕಾಣಾ ಕೂಡಲಸಂಗಮದೇವಾ.

ಇಂಬುಗೊಳ್ಳು = ಆವರಿಸು; ಸನ್ನಿಹಿತ = ಸಮೀಪಸ್ಥ.

ಭಾವಃ - ಮನಸಿನಲ್ಲಿ ಅಹಂಕಾರವು ಉಂಟಾಗಲು ಪರಮಾತ್ಮನು ನಿಲ್ಲಲಾರನು. ಆದ್ದರಿಂದ ಅಹಂಕಾರಕ್ಕೆ ಸ್ಥಾನಕೊಡದೆ ಲಿಂಗ ತನುವಾಗಿ ನೀನು ಆಚರಿಸಬೇಕು. ನೀನು ಹೀಗೆ ಅಹಂಕಾರರಹಿತನಾಗಿ ಆಚರಿಸಿದರೆ ಪರಮಾತ್ಮನು ನಿನ್ನಲ್ಲಿ ನೆಲೆಗೊಳ್ಳುವನು.

(೮೯) ತನು ನಿಮ್ಮದೆಂದ ಬಳಿಕ, ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ, ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ, ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ, ಎನಗೆ ಬೇರೆ ವಿಚಾರ ಉಂಟೇ ಕೂಡಲಸಂಗಮದೇವ?

ಭಾವಃ—ಎಲೋ ಪರಮಾತ್ಮನೇ ಈ ನನ್ನ ತನುವು ನಿನ್ನದೆಂದ ಬಳಿಕ ಅದನ್ನು ಬಿಟ್ಟು ಬೇರೊಂದು ತನುವು ನನಗಿಲ್ಲ. ನನ್ನ ಮನಸ್ಸು ನಿನ್ನದೆಂದಬಳಿಕ ಆ ಮನಸ್ಸನ್ನು ಬಿಟ್ಟು ಬೇರೊಂದು ಮನವು ನನಗಿಲ್ಲ. ಈ ನನ್ನ ಧನವು ನಿನ್ನದೆಂದ ಬಳಿಕ ಅದನ್ನು ಬಿಟ್ಟು ಬೇರೆ ಧನವು ನನಗಿಲ್ಲ. ಹೀಗೆ ಈ ನನ್ನ ತನು, ಮನ, ಧನಗಳು ನಿಮ್ಮದೆಂದು ತಿಳಿದ ಬಳಿಕ, ಅವು ನನ್ನವು ನಿನ್ನವು ಎಂಬ ಭಿನ್ನ ವಿಚಾರಗಳು ಹೇಗೆ ಉಳಿಯಬಹುದು?

(೯೦) ತೊತ್ತಿಂಗೆ ಬಲ್ಲಹನೊಲಿದಡೆ, ಪದವಿಯ ಮಾಡದೆ ಮಾಣ್ಬನೇ? ಜೇಡರ ದಾಸಯ್ಯಂಗೊಲಿದಾತ ಮತ್ತೊಬ್ಬ ದೇವನೇ ಅಯ್ಯಾ? ಮಾದರ ಚನ್ನಯ್ಯಂಗೆ, ಡೋಹರ ಕಕ್ಕಯ್ಯಂಗೆ, ತೆಲುಗು ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೇ ಅಯ್ಯ? ಎನ್ನ ಮನದ ಪಂಚೇಂದ್ರಿಯಗಳು ನಿಮ್ಮಕ್ತಲಾದರೆ ತನ್ನಂತೆ ಮಾಡುವ ಕೂಡಲಸಂಗಮದೇವ.

ಬಲ್ಲಹ = ಯಜಮಾನ, ದೊರೆ; ಮಾಣ್ಬನೇ = ಬಿಡುವನೇ?

ಭಾವಃ—ಒಬ್ಬ ಅರಸನು ತೊತ್ತಿಗೆ ಒಲಿದು ಲಗ್ನವಾದರೆ ಅವಳಿಗೆ ಶ್ರೇಷ್ಠ ಪದವಿಯು ಉಂಟಾಗುವದು. ಆಕೆಯು ತೊತ್ತಾಗಿ ಉಳಿಯ

ಲಾರಳು. ಜೇಡರ ದಾಸಯ್ಯನಿಗೆ ಒಲಿದ ಪರಮಾತ್ಮನು ಬೇರೆ ಯಾವ ದೇವನೂ ಅಲ್ಲ. ಅವನು ಜಗತ್ತನ್ನು ನಿರ್ಮಿಸಿದ ದೇವನೇ ಇದ್ದಾನೆ. ಹಾಗೆಯೇ ಮಾದರ ಚನ್ನನಿಗೆ, ಡೋಹರ ಕಕ್ಕಯ್ಯನಿಗೆ, ತೆಲುಗು ಜೊಮ್ಮಯ್ಯನಿಗೆ ಒಲಿದಾತ ಅದೇ ಪರಮಾತ್ಮನಿದ್ದಾನೆ. ಅಂದರೆ ಭಕ್ತರು ಯಾವ ಜಾತಿಯವರಿದ್ದರೂ ಅವರನ್ನು ಪರಮಾತ್ಮನು ಸಮವಾಗಿ ನೋಡುತ್ತಾನೆ. ಮನಸ್ಸಿನಲ್ಲಿರುವ ಐದು ಇಂದ್ರಿಯಗಳು ಪರಮಾತ್ಮನ ಕಡೆಗೆ ಒಲಿದರೆ, ಭಕ್ತರೆಲ್ಲರೂ ಪರಮಾತ್ಮನಾಗಿಯೇ ಬಿಡುತ್ತಾನೆ.

(೯೧) ಪ್ರಾಣಲಿಂಗ ಪ್ರತಿಗ್ರಾಹಕನಾದ ಬಳಿಕ ಲಿಂಗವಿರಹಿತವಾಗಿ ನಡೆವ ಪರಿ ಇನ್ನೆಂತೋ? ಲಿಂಗವಿರಹಿತನಾಗಿ ನುಡಿವ ಪರಿ ಇನ್ನೆಂತೋ? ಪಂಚೇಂದ್ರಿಯ ಸುಖವನು ಲಿಂಗವಿರಹಿತವಾಗಿ ಭುಂಜಿಸಲಾಗದು. ಲಿಂಗವಿರಹಿತವಾಗಿ ಉಗುಳ ನುಂಗಲಾಗದು. ಇಂತೆಂದುದು ಕೂಡಲ ಸಂಗನ ವಚನ.

ಪ್ರತಿಗ್ರಾಹಕ = ಸ್ವೀಕರಿಸುವವ; ಭುಂಜಿಸು = ಊಟಮಾಡು.

ಭಾವಃ – ಈ ಪ್ರಕಾರ ನಿನ್ನ ಪ್ರಾಣದಲ್ಲಿ ಲಿಂಗವು ನೆಲೆಗೊಂಡ ಬಳಿಕ, ಲಿಂಗವಿಲ್ಲದೆ ನೀನು ನಡೆಯುವ ಸ್ಥಿತಿಯೇ ಉಳಿಯುವದಿಲ್ಲ. ಲಿಂಗವಿಲ್ಲದೆ ನುಡಿಯುವದೂ ಉಳಿಯುವದಿಲ್ಲ. ಐದು ಇಂದ್ರಿಯಗಳ ಮೂಲಕ ಉಂಟಾಗುವ ಸುಖವನ್ನು ಲಿಂಗವಿಲ್ಲದೆ ಅನುಭವಿಸುವದೂ ಉಳಿಯುವದಿಲ್ಲ. ಇಂಥ ಸ್ಥಿತಿಯಲ್ಲಿ ಲಿಂಗವಿಲ್ಲದೆ ಉಗುಳು ಸಹ ನುಂಗಲಾಗದೆಂದು ಪರಮಾತ್ಮನ ವಚನವು ಇದೆ.

(೯೨) ಹತ್ತುಸಾವಿರ ಗೀತವ ಹಾಡಿ, ಅರ್ಥವಿಟ್ಟಲ್ಲಿ ಫಲವೇನು, ಮುಟ್ಟುವ ತೆರನರಿಯದನ್ನಕ್ಕ? ಕಟ್ಟಿದರೇನು, ಬಿಟ್ಟರೇನು, ಮನವು ಲಿಂಗವ ಮುಟ್ಟದನ್ನಕ್ಕ? ಮಾತಿನಲ್ಲಿ ಒಲಿಸಿ ಮಹತ್ತ್ವ ಲಿಂಗವ ಕಂಡೆಹೆನೆಂಬ ಪಾತಕರ ಮೆಚ್ಚ ಕೂಡಲಸಂಗಮದೇವ.

ಭಾವಃ – ಪರಮಾತ್ಮನನ್ನು ಕಾಣುವ ರೀತಿಯನ್ನು ತಿಳಿಯದೆ ಹೋದರೆ ಅವನ ವಿಷಯವಾಗಿ ಹತ್ತುಸಾವಿರ ಹಾಡನ್ನು ಹಾಡಿ ಅವುಗಳ ಅರ್ಥವನ್ನು ಮಾಡಿದಲ್ಲಿ ಫಲವೇನು? ಮನಸ್ಸು ಲಿಂಗದಲ್ಲಿ ಮಗ್ನನಾಗದೆ ಹೋದರೆ ಆತನ ಚಿನ್ಹವನ್ನು ಬರೀ ಶರೀರದ ಮೇಲೆ ಕಟ್ಟಿದರೇನು ಅಥವಾ ಬಿಟ್ಟರೇನು? ಲಿಂಗದ ಬರೀ ಅರ್ಥವನ್ನು ಹೇಳಿದಲ್ಲಿ

ಪರಮಾತ್ಮನು ಒಲಿಯುತ್ತಾನೆಂದು ಅನೇಕರು ತಿಳಿದಿರುತ್ತಾರೆ. ಅವರು ಪಾಪಿಷ್ಠರು. ಪರಮಾತ್ಮನು ಅಂಥವರನ್ನು ಕಂಡು ಮೆಚ್ಚಲಾರನು.

(೯೩) ನಾ ನಿಮ್ಮ ನೆನೆವೆನು. ನೀವೆನ್ನನರಿಯಿರಿ. ನಾ ನಿಮ್ಮನೋಲೈಸುವೆ. ನೀವೆನ್ನ ಕಾಣಿರಿ. ಆನೆಂತು ಬದುಕುವೆನೆಂತು ಜೀವಿಸುವೆ? ಕೂಡಲಸಂಗಮದೇವಾ ಎನಗೆ ನೀವೇ ಪ್ರಾಣ ಗತಿ ಮತಿ ನೋಡಯ್ಯ.

ಓಲೈಸು = ಸೇವೆ ಮಾಡು.

ಭಾವಃ— ಎಲೋ ಪರಮಾತ್ಮನೇ. ನಾನು ನಿನ್ನ ಧ್ಯಾನ ಮಾಡುತ್ತಿದ್ದೇನೆ. ಆದರೆ ನೀನು ನನ್ನನ್ನು ಲಕ್ಷಿಸುವದಿಲ್ಲವಲ್ಲಾ! ಎಲೋ ಪರಮಾತ್ಮನೇ, ನಾನು ನಿನ್ನ ಸೇವೆ ಮಾಡುತ್ತೇನೆ. ಆದರೆ ನೀನು ನನ್ನನ್ನು ಕಣ್ಣೆತ್ತಿಸಹ ನೋಡುವದಿಲ್ಲವಲ್ಲಾ! ನಾನು ಹೇಗೆ ಬದುಕಲಿ, ಹೇಗೆ ಜೀವಿಸಲಿ! ಎಲೋ ಪರಮಾತ್ಮನೇ, ನೀನು ನನಗೆ ಪ್ರಾಣವಾಗಿದ್ದೀ, ಗತಿಯಾಗಿದ್ದೀ, ಮತಿಯಾಗಿದ್ದೀ. ಈ ಪ್ರಕಾರ ಬಸವೇಶ್ವರನು ಇಲ್ಲಿ ಪರಮಾತ್ಮನನ್ನು ಕುರಿತು ಪ್ರಾರ್ಥಿಸುತ್ತಾನೆ.

ಲಿಂಗಧ್ಯಾನ.

(೯೪) ಆಸೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯಂಗಳ ಮುಟ್ಟಲೀಯದೆ ಆಚಾರವ ಶಿವಾಚಾರವ ಮಾಡುವೆ. ಭಯಭಕ್ತಿಯಿಂದ ತೋರುವೆ. ಮನದಲ್ಲಿ ವಂಚನೆ ಇಲ್ಲದೆ ಭಾವ ಶುದ್ಧ ಪೂಜೆಯ ಮಾಡುವೆ. ಎನ್ನ ಪ್ರಾಣಶಕ್ತಿಯಿಂದ ಕೂಡುವೆ ಕೂಡಲಸಂಗಮದೇವರ.

ಮುಟ್ಟಲೀಯದೆ = ಮುಟ್ಟಗೊಡದೆ.

ಭಾವಃ—ಆಶೆ, ಸಿಟ್ಟು, ಹರುಷ ಮೊದಲಾದ ವಿಕಾರಗಳು ನನ್ನ ಇಂದ್ರಿಯುಗಳನ್ನು ತಟ್ಟದಂತೆ ಮಾಡಿ ನನ್ನ ಆಚಾರಗಳು ಶಿವಾಚಾರಗಳಾಗುವಂತೆ ನಾನು ಮಾಡುವೆನು. ಎಲೋ ಪರಮಾತ್ಮನೇ, ನಾನು ಭಯಭಕ್ತಿಯಿಂದ ನಿನ್ನೊಡನೆ ಆಚರಿಸುತ್ತೇನೆ. ನಾನು ನನ್ನ ಮನಸ್ಸಿನಲ್ಲಿ ವಂಚನೆ ಇಲ್ಲದೆ ಭಾವಶುದ್ಧವಾಗಿ ನಿನ್ನ ಪೂಜೆ ಮಾಡುತ್ತೇನೆ. ನನ್ನ ಪ್ರಾಣದಲ್ಲಿ ಶಕ್ತಿ ಇದ್ದಷ್ಟನ್ನೂ ಉಪಯೋಗಿಸಿ ನಾನು ನಿನ್ನಲ್ಲಿ ಬೆರೆತು ಬಿಡುವೆನು.

(೯೫) ನಿಮ್ಮ ನೋಟವನಂತ ಸುಖ. ನಿಮ್ಮ ಕೂಟ ಪರಮಸುಖವಯ್ಯ. ಅಷ್ಟಕೋಟಿ ರೋಮಂಗಳೆಲ್ಲ ಕಂಗಳಾಗಿ ನೋಡುತಿರ್ದೆನು. ಕೂಡಲಸಂಗಮದೇವಯ್ಯ ನಿಮ್ಮ ನೋಡಿ ನೋಡಿ ಮನದಲ್ಲಿ ರತಿ ಹುಟ್ಟಿ, ನಿವಿರ್ದವೆನ್ನ ಕಳೆಗಳು.

ರೋಮ = ಕೂದಲು ; ರತಿ = ಪ್ರೀತಿ; ನಿವಿರ್ದವು = ಸೆಟೆದು ನಿಂತವು, ಚೈತನ್ಯಹೊಂದಿದವು; ಕಳೆಗಳು = ಶಕ್ತಿಗಳು.

ಭಾವಃ—ಎಲೋ ಪರಮಾತ್ಮನೇ ನಾನು ನಿನ್ನನ್ನು ನೋಡಿದಲ್ಲಿ ನನಗೆ ಅತ್ಯಂತ ಸುಖವಾಗುತ್ತದೆ. ನಾನು ನಿಮ್ಮ ಕೂಡ ಇದ್ದರಂತೂ ಅದು ನನಗೆ ಪರಮಸುಖವು. ನನ್ನ ಶರೀರದಲ್ಲಿ ಎಂಟು ಕೋಟಿ ರೋಮಗಳಿದ್ದು ಅವೆಲ್ಲವೂ ನನ್ನ ಕಣ್ಣುಗಳೋ ಏನೋ ಅನ್ನುವ ಹಾಗೆ ನಿನ್ನಲ್ಲಿ ದೃಷ್ಟಿ ಇಟ್ಟು ನೋಡುತ್ತಿದ್ದೇನೆ. ಎಲೋ ಪರಮಾತ್ಮನೇ, ಆಗ ನಿನ್ನಲ್ಲಿ ನಟ್ಟರುವ ನನ್ನ ಲಕ್ಷವನ್ನು ಚಲಿಸದೆ ನಾನು ನಿನ್ನನ್ನು ಒಂದೇ ಸವನೇ ನೋಡುತ್ತಾ ಇದ್ದೇನೆ. ಆ ಸಮಯದಲ್ಲಿ ನಿನ್ನಲ್ಲಿ ನನ್ನಪ್ರೇಮವು ಉತ್ಪನ್ನವಾಗಲಾಗಿ ನನ್ನಲ್ಲಿರುವ ಕಲೆಗಳೆಲ್ಲವೂ ಚೇತರಿಸಿಕೊಳ್ಳುತ್ತವೆ.

(೯೬) ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದರಿಯೆನು. ಲಿಂಗದ ಬೆಳಗು ಒಳಗೊಂಡಿತ್ತಾಗಿ ಏನೆಂದರಿಯೆನು. ಕೂಡಲಸಂಗಮದೇವನ ಧ್ಯಾನದಿಂದ ಆನೇನೆಂದರಿಯೆನು.

ಭಾವಃ—ಆಗ ನನ್ನಲ್ಲಿ ಜ್ಞಾನವು ಸಹಜವಾಗಿ ಉಂಟಾಗಿ ಚಲಿಸಹತ್ತುತ್ತದೆ. ಆಗ ನಾನು ನನ್ನನ್ನು ಮರೆತು ಬಿಡುತ್ತೇನೆ. ಪರಮಾತ್ಮನ ಪ್ರಕಾಶವು ನನ್ನಲ್ಲಿ ತೋರಹತ್ತುತ್ತದೆ. ಆಗ ನಾನು ಅದು ಏನೆಂಬುದನ್ನು ಸಹ ತಿಳಿಯಲಾರೆನು. ಪರಮಾತ್ಮನ ಇಂಥ ಧ್ಯಾನದಲ್ಲಿ ನಾನು ಏನೊಂದನ್ನು ತಿಳಿಯಲಾರೆನು.

The Vijay College
LIBRARY
VIJAY COLLEGE.
BIJAPUR.

ಲಿಂಗದಲ್ಲಿ ಸಾಮರಸ್ಯವು.

(೯೭) ಅಂತರಂಗ ಬಹಿರಂಗ ಆತ್ಮಸಂಗ ಒಂದೇಯಯ್ಯಾ. ನಾದ ಬಿಂದು ಕಳಾತೀತ ಆದಿಯಾಧಾರ ನೀನೇ ಅಯ್ಯಾ. ಆರೂಢದ ಕೂಟದ ಸುಖವ ಕೂಡಲಸಂಗಯ್ಯಾ ತಾನೇ ಬಲ್ಲ.

ಆರೂಢದ = ಸ್ಥಾಪನೆಹೊಂದಿದ; ಕೂಟ = ಐಕ್ಯ.

ಭಾವಃ— ಆಗ ಅಂತರಂಗ ಬಹಿರಂಗ ಎಂಬ ಭಿನ್ನ ಭಾವಗಳು ಅಳಿದು ಹೋಗುತ್ತವೆ. ಅದೇ ಆತ್ಮಸಂಗವು, ಪರಮಾತ್ಮನಲ್ಲಿಯು ಸಾಮರಸ್ಯಭಾವವು. ಜಗತ್ತಿಗೆ ಕಾರಣವಾಗಿರುವ ನಾದಬಿಂದು ಕಳೆಗಳಿಗೆ ನಿಲುಕದವನಾಗಿ ಎಲ್ಲಕ್ಕೂ ಮೂಲನಾಗಿ ಎಲ್ಲಕ್ಕೂ ಆಧಾರನಾಗಿ ಇದ್ದವನು ನೀನೇ. ಪರಮಾತ್ಮನಲ್ಲಿ ಇಂಥ ಸಾಮರಸ್ಯ ಸ್ಥಿತಿಯು ಸ್ಥಿರಪಡಲು ಆಗ ಉಂಟಾಗುವ ಸುಖವನ್ನು ಮಾತಿನಲ್ಲಿ ಹೇಳಲಿಕ್ಕೆ ಬರಲಾರದು. ಅದರ ಅನುಭವವನ್ನು ಪರಮಾತ್ಮನೇ ಬಲ್ಲನು.

(೯೮) ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ. ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ. ಜಗಕೆ ಬಲ್ಲಿದ ನೀನು. ಆನು ನಿನಗೆ ಬಲ್ಲಿದನು ಕಂಡಯ್ಯಾ. ಕರಿಯು ಕನ್ನಡಿಯೊಳಡಗಿದಂತಯ್ಯಾ, ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.

ಬಲ್ಲಿದ = ಶಕ್ತಿವಂತ; ಆನು = ನಾನು; ಕರಿ = ಆನೆ.

ಭಾವಃ— ಎಲೋ ಪರಮಾತ್ಮನೇ, ನಿನ್ನ ಮಾಯೆಯು ಜಗತ್ತನ್ನು ಸುತ್ತು ಹಾಕಿದೆ. ಆದರೆ ಈಗ ನನ್ನ ಮನಸ್ಸು ನಿನ್ನನ್ನು ಸುತ್ತಿ ಹಾಕಿ ಬಂಧಿಸಿ ಬಿಟ್ಟಿರುತ್ತದೆ. ವಿಶ್ವದಲ್ಲೆಲ್ಲ ನೀನೊಬ್ಬನೇ ಅತ್ಯಂತ ಸಾಮರ್ಥ್ಯವುಳ್ಳವನು. ಆದರೆ ನಾನು ಈಗ ನಿನ್ನಕಿಂತಲೂ ಸಾಮರ್ಥ್ಯವುಳ್ಳವನಾಗಿದ್ದೇನೆ. ಹೇಗೆ ಕನ್ನಡಿಯಲ್ಲಿ ಆನೆಯು ಅಡಗಿರುತ್ತದೆಯೋ ಹಾಗೆ ನೀನು ನನ್ನಲ್ಲಿ ಅಡಗಿರುತ್ತಿ.

(೯೯) ಬೆಳಗಿನೊಳಗಣ ಬೆಳಗು ಮಹಾ ಬೆಳಗು. ಶಿವಶಿವ ಪರಮಾಶ್ರಯುವೇ ತಾನಾಗಿ ಶತಪತ್ರ ಕಮಳ ಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿಪ್ಪ ನಮ್ಮ ಕೂಡಲಸಂಗಮದೇವ

ಬೆಳಗು = ಪ್ರಕಾಶ; ಪರಮಾಶ್ರಯು = ಶ್ರೇಷ್ಠವಾದ ಆಧಾರ; ಶತಪತ್ರ = ನೂರುದಳಗಳುಳ್ಳ; ಕರ್ಣಿಕಾ = ದೇಟು.

ಭಾವಃ— ನಾನು ಪರಮಾತ್ಮನಲ್ಲಿ ಸಾಮರಸ್ಯವನ್ನು ಹೊಂದಲು ಅದು ಪ್ರಕಾಶದೊಳಗಿನ ಪ್ರಕಾಶವು. ಅದು ಮಹತ್ತರವಾದ ಪ್ರಕಾಶವು. ಶಿವಶಿವಾ! ಪರಮಾತ್ಮನು ಎಲ್ಲದಕ್ಕೂ ಆಧಾರವಾಗಿ ನನ್ನಲ್ಲಿರುವ ಒಂದು ನೂರು ಎಲೆಗಳುಳ್ಳ ಕಮಲದ ದೇಂಟಿನ ಮಧ್ಯದಲ್ಲಿ ಸ್ವಯಂಭುವಾಗಿ ಸ್ವತಃ ಸಿದ್ಧನಾಗಿ ವಾಸಮಾಡುತ್ತಾನೆ.

(೧೦೦) ಸಮಸ್ತ ಕತ್ತಲೆಯ ಮುಸುಕವ ಕಳೆದಿಪ್ಪ ಇರವ ನೋಡಾ. ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗು ಕೂಡಿದ ಕೂಟದ ಸುಖವ ಕೂಡಲಸಂಗಯ್ಯಾ ತಾನೇಬಲ್ಲ.

ಮುಸುಕ = ಗಾಢಾಂಧಕಾರ; ಇರವು = ಸ್ಥಿತಿಯು.

ಭಾವಃ— ಜಗತ್ತಿನಲ್ಲೆಲ್ಲ ಎಲ್ಲ ಕಡೆಗೂ ವ್ಯಾಪಿಸಿರುವ ಗಾಢಾಂಧಕಾರದಿಂದ ದೂರವಾಗಿದ್ದ ನನ್ನ ಈ ಸ್ಥಿತಿಯನ್ನು ನೋಡಿರಿ. ಆಗ ಪ್ರಕಾಶಕ್ಕೆ ಪ್ರಕಾಶವೇ ನನಗೆ ಸಿಂಹಾಸನವಾಗಿದೆ. ಪ್ರಕಾಶಕ್ಕೆ ಪ್ರಕಾಶವನ್ನು ಕೂಡಿದ ಈ ಸಂಯೋಗದಲ್ಲಿ ಉಂಟಾದ ಸುಖವನ್ನು ನಾನು ಏನೆಂದು ಅರಿಯೆನು. ಅದನ್ನು ಪರಮಾತ್ಮನೇ ಬಲ್ಲನು.

(೧೦೧) ಏನೆಂಬೆನೇನೆಂಬೆ ಒಂದೆರಡಾದುದ? ಏನೆಂಬೆನೇನೆಂಬೆ ಎರಡೊಂದಾದುದ? ಏನೆಂಬೆನೇನೆಂಬೆನವಿರಳ ಘನವ? ಮಹಾದಾನಿ ಕೂಡಲಸಂಗಯ್ಯಾ ತಾನೇ ಬಲ್ಲ.

ಭಾವಃ— ಪರಮಾತ್ಮನು ಮೊದಲು ಒಬ್ಬನೇ ಇದ್ದು ಅವನು ಮುಂದೆ ಎರಡಾದದ್ದನ್ನು ನಾನೇನು ಹೇಳಲಿ, ನಾನೇನು ಹೇಳಲಿ! ಆ ಎರಡು ಪುನಃ ಒಂದಾದದ್ದನ್ನು ನಾನೇನು ಹೇಳಲಿ, ನಾನೇನು ಹೇಳಲಿ! ಒಂದೇ ಒಂದಾದ ಮಹತ್ತರವಾದ ಈ ವಸ್ತುವನ್ನು ನಾನೇನು ಹೇಳಲಿ! ನಾನೇನು ಹೇಳಲಿ! ದಾನಗುಣವುಳ್ಳಂಥ ಪರಮಾತ್ಮನೇ ಅದನ್ನು ನೀನೇ ಬಲ್ಲೆ.